# ಶ್ರೀ ಶಾರದಾ

ಮಾಸಪತ್ರಿಕೆ – 15 ಅಕ್ಟೋಬರ್ 2012

॥ ಧಿಯೋ ಯೋನಃ ಪ್ರಚೋದಯಾತ್ ॥

ಬೆಲೆ ರೂ.2.50
WPP No. SK/MNG/WPP/69
D.O.P - 15th of every month from Udupi Sorting Office


Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-12 ಸಂಚಿಕೆ-10 ಪುಟಗಳು-10 Registered Under No.J/UDP/1260/2012-2014 Dated from 01-01-2012 to 31-12-2014.



**ಪ್ರಸವ ಪೂರ್ವ ಲಿಂಗ ಪರೀಕ್ಷೆ**
ಪ್ರಗತಿ ಭಂಡಿ ಪೆರ್ಡೂರು
ಪುಟ-4

**ಅಪ್ರತಿಮ ಪ್ರತಿಭಾನ್ವಿತೆ ಕುಮಾರಿ ಅಕ್ಷತಾ**
ಶ್ರೀಮತಿ ಸಾವಿತ್ರಿ ಮನೋಹರ
ಪುಟ-5



**ವೇದಗಣಿತದ ಪರಿಚಯ**
ಸಿ.ಎಸ್.ರಾವ್
ಪುಟ-6

**"ಲೆಪ್ರೋಸ್ಕೋಪಿಕ್ ಸರ್ಜರಿ" ಪುಸ್ತಕ ಬಿಡುಗಡೆ**
ವಿದ್ಯಾ ಎಸ್.ರಾವ್
ಪುಟ-7


# ಸಾಹಿತಿ ಸಾವಿತ್ರಿ ಮನೋಹರ್‌ಗೆ ಪರಿಷತ್ ಸನ್ಮಾನ



''ಇವತ್ತು ಸಾಹಿತ್ಯ ಏನಾದ್ರೂ ನಿಜ ಅರ್ಥದಲ್ಲಿ ಜೀವಂತವಾಗಿದೆ ಎಂದರೆ ಅದು ಹಳ್ಳಿಗಳಲ್ಲಿ. ಈ ನಿಟ್ಟಿನಲ್ಲಿ ಕಾರ್ಕಳದ ಗ್ರಾಮೀಣ ಪ್ರದೇಶವಾದ ದುರ್ಗಾ ಗ್ರಾಮದ ತೆಳ್ಳಾರು ಪ್ರೌಢ ಶಾಲೆಯಲ್ಲಿ ಮುಖ್ಯೋಪಾಧ್ಯಾಯಿನಿಯಾಗಿ ದುಡಿಯುತ್ತ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಕ್ಕಳಿಗೆ ಸಾಹಿತ್ಯ ಕಮ್ಮಟಗಳನ್ನು ಏರ್ಪಡಿಸಿ, ಅವರಲ್ಲಿಸಾಹಿತ್ಯ ಆಸಕ್ತಿ ಮೂಡಿಸುವಲ್ಲಿ ಶ್ರೀಮತಿ ಸಾವಿತ್ರಿ ಮನೋಹರ ಇವರ ಸೇವೆ, ಶ್ರಮ ಪ್ರಶಂಸನೀಯ. ಇಂದು ಅವರ ಪುಸ್ತಕ 'ನಿರೀಕ್ಷೆಯ ಹಾದಿ'ಯಲ್ಲಿ ಬಿಡುಗಡೆಗೊಂಡಿದೆ. ಅವರಿಂದ ಇನ್ನಷ್ಟು ಸಾಹಿತ್ಯ ಸೇವೆಯ ನಿರೀಕ್ಷೆಯಲ್ಲಿ ನಾವಿದ್ದೇವೆ. ಈ ಸಂದರ್ಭದಲ್ಲಿ ಸಾಹಿತ್ಯ ಪರಿಷತ್ತಿನ ವತಿಯಿಂದ ಅವರನ್ನು ಸನ್ಮಾನಿಸಲು ನಮಗೆ ಹೆಮ್ಮೆ ಯಾಗುತ್ತಿದೆ'' ಎಂದು ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಶ್ರೀ ಹರಿಕೃಷ್ಣ ಪುನರೂರು ನುಡಿದರು.

ಅವರು ಅಂಬಲ್ಪಾಡಿಯಲ್ಲಿ ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಅವರನ್ನು ಸನ್ಮಾನಿಸಿ ಶುಭ ಹಾರೈಸಿದರು. ಅವರೊಂದಿಗೆ ಪುಸ್ತಕ ಪ್ರಕಾಶಕಿ ಶ್ರೀಮತಿ ಇಂದಿರಾ ಹಾಲಂಬಿಯವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಶ್ರೀ ನಾರಾಯಣ ಮಡಿ, ಲೇಖಕಿಯರ ಸಂಘದ ಅಧ್ಯಕ್ಷೆ ಶ್ರೀಮತಿ ವಸಂತಿ ಬ್ರಹ್ಮಾವರ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಶ್ರೀ ಸುರೇಂದ್ರ ಅಡಿಗ ಮತ್ತು ಲೇಖಕಿ ಶ್ರೀಮತಿ ಯಶವಂತಿ ಸುವರ್ಣ ಉಪಸ್ಥಿತರಿದ್ದರು.

-ಸಾವಿತ್ರಿ ಮನೋಹರ್

''ಎಲ್ಲಿಂದ ಬಂತೇ, ಈ ಬೆಳಕು?''

ನಮ್ಮ
ಪ್ರೀತಿಯ
ಓದುಗರಿಗೆ,
ಲೇಖಕರಿಗೆ,
ಜಾಹೀರಾತುದಾರರಿಗೆ,
ಶ್ರೀಶಾರದಾ ವೇದಿಕೆಯ
ಸದಸ್ಯರಿಗೆ ಮತ್ತು
ನಮ್ಮ ಎಲ್ಲಾ
ಸಮಾಜ ಬಾಂಧವರಿಗೆ


**ದೀಪಾವಳಿಯ ಹಾರ್ದಿಕ ಶುಭಾಶಯಗಳು**

ಸಂಪಾದಕ ಮಂಡಳಿ,
ಶ್ರೀಶಾರದಾ ಪತ್ರಿಕೆ

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.**





॥ನಮೋ ದೇವ್ಯೈ ಮಹಾದೇವ್ಯೈ ಶಿವಾಯ್ಯೈ ಸತತಂ ನಮಃ॥

# ಆಮಂತ್ರಣ

ಮಾನ್ಯ ಸಮಾಜ ಬಾಂಧವರೇ,

ಸ್ವಸ್ತಿ! ಶ್ರೀ ನಂದನ ನಾಮ ಸಂವತ್ಸರದ ತುಲಾ ಮಾಸ ದಿನ ೮ ಸಲುವ ಅಶ್ವಯುಜ ಶುದ□(ದಶಮಿ) ೧೦ ಯು, ತಾ.24-10-2012ನೇ ಬುಧವಾರ

**ವಿಜಯದಶಮಿ ದಿನದಂದು**

## ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಪೂರ್ವಾಹ್ನ ಮತ್ತು ಅಪರಾಹ್ನದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

**ಸಿ. ಎಸ್. ರಾವ್**
ಅಧ್ಯಕ್ಷರು

**ಬಿ. ಕೃಷ್ಣಮೂರ್ತಿ ರಾವ್**
ಕಾರ್ಯದರ್ಶಿ

**ಹಾಗೂ ಕಾರ್ಯಕಾರಿ ಸಮಿತಿಯ ಸವಿನಯ ಆಮಂತ್ರಣ**

ವಿ.ಸೂ. : ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರವನ್ನು ನೀಡಲಾಗುವುದು.

**ಸಮಾಜ ಬಾಂಧವರು ಈ ಪ್ರಕಟಣೆಯನ್ನೇ ಆಮಂತ್ರಣ ಎಂದು ತಿಳಿಯಬೇಕಾಗಿ ವಿನಂತಿ.**

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

ಸಮಾಜ ಬಾಂಧವರು ಯಾವುದೇ ಲೇಖನ, ಸುದ್ದಿ, ವರದಿ, ಇತ್ಯಾದಿಗಳನ್ನು ಕಳುಹಿಸುವಾಗ ತಮ್ಮ ಹೆಸರು ಮತ್ತು ವಿಳಾಸವನ್ನು ನಮೂದಿಸಿ ಸಹಕರಿಸಬೇಕಾಗಿ ವಿನಂತಿ.

-ಸಂಪಾದಕ ಮಂಡಳಿ

## ಸುಭಾಷಿತ-ನೀತಿಶಾಸ್ತ್ರ

**ವಿದ್ವಾನೇವ ವಿಜಾನಾತಿ ವಿದ್ವಜ್ಜನ**
**ಪರಿಶ್ರಮಂ ।**
**ನಹಿ ವಂಧ್ಯಾ ವಿಜಾನಾತಿ ಗುರ್ವೀಂ ಪ್ರಸವ**
**ವೇದನಾತ್ ॥**

ವಿದ್ವಾಂಸರ ಶ್ರಮವನ್ನು ವಿದ್ವಾಂಸರೇ ಬಲ್ಲರು. ಇತರರು ತಿಳಿಯರು. ಅಧಿಕವಾದ ಪ್ರಸವ ವೇದನೆಯನ್ನು ಬಸುರಿಯಲ್ಲದೆ ಬಂಜೆಯು ಅರಿಯಲಾರಳು.

★★★★

**ದೃಷ್ಟಿಪೂತಂ ನ್ಯ ಸೇತ್ಪಾದಂ ವಸ್ತ್ರಪೂತಂ**
**ಜಲಂಪಿಬೇತ್ ।**
**ಸತ್ಯಪೂತಂ ವದೇದ್ವಾಚಂ ಮನಃಪೂತಂ**
**ಸಮಾಚರೇತ್ ॥**

ಕಣ್ಣಿನಿಂದ ನೋಡಿ ಹೆಜ್ಜೆಯನ್ನಿಡಬೇಕು. ವಸ್ತ್ರದಿಂದ ಶೋಧಿಸಿ ನೀರನ್ನು ಕುಡಿಯ ಬೇಕು. ಸತ್ಯವಾಗಿ ಮಾತನಾಡಬೇಕು. ಮನಸ್ಸಿಗೆ ತೃಪ್ತಿಯಾಗಿ ತೋರಿದರೆ ಕೆಲಸ ಮಾಡಬೇಕು.


★★★★

**ಖದ್ಯೋತೋ ದ್ಯೋತತೇ ತಾವತ್**
**ಯಾವನ್ನೋತೇತಿ ಚಂದಮಾಃ ।**
**ಉದಿತೇತ್ ಸಹಸ್ರಾಂಶೌ ನ ಖದ್ಯೋತೋ**
**ನ ಚಂದ್ರಮಾ ॥**

ಚಂದ್ರೋದಯವಾಗುವವರೆಗೂ ಮಿಂಚು ಹುಳುವು ಹೊಳೆಯುತ್ತದೆ. ಸೂರ್ಯೋದಯವಾದರೆ ಮಿಂಚು ಹುಳವೂ ಇಲ್ಲ, ಚಂದ್ರನೂ ಇಲ್ಲ.

*ಸಂಗ್ರಹ : ಎಚ್.ಎನ್.ಶ್ಯಾನುಭಾಗ್*

# ಶ್ರೀ ಕೃಷ್ಣಾಯನ
## (ಶ್ರೀ ಮದ್ಭಾಗವತಾನುಸಾರಿ)



**- ಕೆ. ಆತ್ಮಾರಾಮ ಶಾಸ್ತ್ರೀ**
**ಬೆಂಗಳೂರು**

(ಹಿಂದಿನ ಸಂಚಿಕೆಯಿಂದ...)

ಅಗ ಭೀಮನೂ, ದ್ರೌಪದಿಮೊದಲಾದ ಸ್ತ್ರೀಯರೂ, ಇತರ ರಾಜರೂ ಜೋರಾಗಿ ನಕ್ಕುಬಿಟ್ಟರು. ಯುಧಿಷ್ಠಿರನು ನಗಬಾರದೆಂದು ಸನ್ನೆ ಮಾಡಿದ್ದರೂ ಕೃಷ್ಣನು ಸನ್ನೆಯಿಂದ ಅನುಮೋದಿಸಿದ್ದನು. ಇಂತು ಅಪಹಾಸ್ಯಕ್ಕೊಳಗಾದ ದುರ್ಯೋಧನನು ನಾಚಿಕೆಯಿಂದ ತಲೆ ತಗ್ಗಿಸಿಕೊಂಡು, ಕೋಪದಿಂದ ಉರಿಯುತ್ತಾ ಹಸ್ತಿನಾಪುರಕ್ಕೆ ಹೊರಟು ಹೋದನು. ಆಗ ಸಜ್ಜನರೆಲ್ಲ 'ಅಯ್ಯೋ' ಎಂದರು. ಯುಧಿಷ್ಠಿರನು ವಿಷಣ್ಣನಾದನು. ಶ್ರೀ ಕೃಷ್ಣನು ಸುಮ್ಮನಿದ್ದನು. ಅವನು ಭೂಭಾರವನ್ನು ಕಡಿಮೆ ಮಾಡಲು ಬಂದವನಲ್ಲವೇ?

ಶಾಲ್ವ ಅಥವಾ ಸಾಲ್ವನು ಸಾಲ್ವ ದೇಶದ ಭೂಪತಿ. ಇವನು ಕಾಶೀರಾಜನ ಪುತ್ರಿಯಾದ ಅಂಬೆಯನ್ನು ಪ್ರೀತಿಸುತ್ತಿದ್ದನು. ಅವಳಿಗೂ ಇವನ ಮೇಲೆ ಗಾಢ ಪ್ರೇಮವಿತ್ತು. ಆದರೆ ಭೀಷ್ಮನು ಅವಳನ್ನೂ, ಅವಳಸೋದರಿಯಾರಾದ ಅಂಬಿಕೆ, ಅಂಬಾಲಿಕೆಯರನ್ನು ಅಪಹರಿಸಿಕೊಂಡು ಹೋದುದರಿಂದ ಸಾಲ್ವನು ಅಂಬೆಯನ್ನು ತಿರಸ್ಕರಿಸಿದನು. ರುಕ್ಮಿಣಿಯ ವಿವಾಹಕ್ಕೆ ಶಿಶುಪಾಲನ ಸಂಗಡ ಅವನೂ ಕುಂಡಿನ ಪುರಕ್ಕೆ ಹೋಗಿದ್ದನು. ಅಲ್ಲಿ ಸಂಭವಿಸಿದ ಯುದ್ಧದಲ್ಲಿ ಇತರ ರಾಜರೊಡನೆ ಅವನೂ ಸೋತು ಓಡಿದ್ದನು. ಆದರೆ ಯಾದವರ ಮೇಲೆ ಸೇಡು ತಿರಿಸಿಕೊಳ್ಳಲು ಯೋಚಿಸುತ್ತಿದ್ದನು. ಭೂಮಿಯ ಮೇಲೆ ಯಾದವರ ಒಂದು ಪಿಳ್ಳೆಯೂ ಇರದಂತೆ ಮಾಡುವುದಾಗಿ ಪ್ರತಿಜ್ಞೆ ಮಾಡಿ ಶಿವನನ್ನು ಕುರಿತು ಘೋರತಪಸ್ಸನ್ನೂ ಮಾಡಿದನು. ಒಂದು ವರ್ಷದೊಳಗೇ ಆಶುತೋಷನಾದ ಪರಶಿವನು ಪ್ರತ್ಯಕ್ಷನಾದನು. ಸಾಲ್ವನು ತನಗೆ ಮನುಷ್ಯ ದೇವಾಸುರಗಂಧರ್ವಾದಿಯಾಗಿ ಯಾರಿಗೂ ಅಭೇದ್ಯವಾದ, ಪವೃಷ್ಣಿಗಳಿಗೆ ಭಯಂಕರವಾದ, ಇಷ್ಟಬಂದಂತೆ ಚಲಿಸುವ ವಿಮಾನವನ್ನು ಅನುಗ್ರಹಿಸುವಂತೆ ಬೇಡಿದನು. ಶಂಕರನು ಮಯನಿಗೆ ಹೇಳಿ ಅಂತಹ ವಿಮಾನವನ್ನು ನಿರ್ಮಿಸಿಕೊಡಿಸಿದನು. ಇದರಿಂದ ಸಾಲ್ವನು ಮದೋದ್ಧಕನಾದನು. ತನ್ನ ಮಿತ್ರನಾದ ಶಿಶುಪಾಲನವಧೆಯಿಂದ ಕ್ರೋಧ ಭುಗಿಲೆದ್ದಿತು. ಅವನು ತನ್ನ ಸೌಭವೆಂಬ ಅದ್ಭುತ ವಿಮಾನದಲ್ಲಿ ಕುಳಿತು ದ್ವಾರಕೆಗೆ ಹೋದನು. ತನ್ನ ಸೈನ್ಯದಿಂದ ನಾಲ್ಕೂ ದಿಕ್ಕುಗಳಿಂದ ದ್ವಾರಕೆಯನ್ನು ಮುತ್ತಿದನು. ದ್ವಾರಕೆಯ ಉಪವನಾದಿಗಳನ್ನು ಧ್ವಂಸ ಮಾಡಿದನು. ಕೋಟೆಯ ಬಾಗಿಲು, ಗೋಪುರ ಪ್ರಾಕಾರಗಳನ್ನು ನೆಲ ಸಮ ಮಾಡಿದನು. ಪ್ರಜೆಗಳೆಲ್ಲ ಭಯಾರ್ತರಾಗಿ ಚೆಲ್ಲಾಪಿಲ್ಲಿ ಓಡಿದರು. ಆಗ ಪ್ರದ್ಯುಮ್ನನು ಅವರಿಗೆ ಧೈರ್ಯ ಹೇಳಿ ತಾನು ರಥವನ್ನೇರಿ ಆಯುಧಗಳ ಸಹಿತ ಯುದ್ಧಕ್ಕೆ ಹೊರಟನು. ಅವನನ್ನು ಸಾತ್ಯಕಿ, ಚಾರುದೇಷ್ಣ, ಸಾಂಬ, ಅಕ್ರೂರ, ಭಾನುವಿಂದ, ಗದ, ಶುಕ, ಸಾರಣರೇ ಮೊದಲಾದ ಯದುವೀರರು ಹಿಂಬಾಲಿಸಿದರು. ತುಮುಲಯುದ್ಧ ಪ್ರಾರಂಭ ವಾಯಿತು. ಪ್ರದ್ಯುಮ್ನನು ತನ್ನ ದಿವ್ಯಾಸ್ತ್ರಗಳಿಂದ ಸಾಲ್ವನ ಮಾಯೆಯನ್ನು ಒಂದೇ ಕ್ಷಣದಲ್ಲಿ ನಾಶ ಮಾಡಿದನು. ಚಿನ್ನದ ರೆಕ್ಕೆಗಳಿರುವ, ಕಬ್ಬಿಣದ ತುದಿಯಿರುವ ಇಪ್ಪತ್ತೈದು ಬಾಣಗಳಿಂದ ಸಾಲ್ವನ ಸೇನಾಪತಿಯನ್ನು ಹೊಡೆದನು. ಅನಂತರ ನೂರು ಬಾಣಗಳಿಂದ ಸಾಲ್ವನನ್ನೂ, ಒಂದೊಂದರಿಂದ ಸೈನಿಕರನ್ನೂ, ಹತ್ತು ಹತ್ತರಿಂದ ಸಾರಥಿಗಳನ್ನೂ, ಮೂರು ಮೂರರಿಂದ ವಾಹನಗಳನ್ನೂ ಗಾಸಿಗೊಳಿಸಿದನು. ಅಂತಹ ಅದ್ಭುತ ಯುದ್ಧವನ್ನು ನೋಡಿ ಅವನ ಮತ್ತು ಶತ್ರುವಿನ ಸೈನಿಕರು ಹೊಗಳಿದರು. ಮಯಾಸುರನಿಂದ ನಿರ್ಮಿತವಾದ ಆಸೌಭವೆಂಬ ವಿಮಾನ ನಿಜವಾಗಿಯೂ ಮಯಾಮಯವಾಗಿತ್ತು. ಒಮ್ಮೆ ಅನೇಕ ರೂಪಗಳಲ್ಲಿ ಕಾಣಿಸಿಕೊಂಡರೆ ಮತ್ತೊಮ್ಮೆ ಏಕರೂಪವನ್ನು ತಾಳುತ್ತಿತ್ತು. ಒಮ್ಮೆ ದೃಶ್ಯ ಮತ್ತೊಮ್ಮೆ ಅದೃಶ್ಯವಾಗುತ್ತಿತ್ತು. ಅದರ ಮಹಿಮೆಯನ್ನು ಊಹಿಸಲೂ ಸಾಧ್ಯವಿರಲಿಲ್ಲ. ಒಮ್ಮೆ ಭೂಮಿಯ ಮೇಲಿದ್ದರೆ ಮತ್ತೊಮ್ಮೆ ಆಕಾಶದಲ್ಲಿರುತ್ತಿತ್ತು. ಒಮ್ಮೆ ಪರ್ವತದ ತುದಿಯಲ್ಲೂ, ಮರುಕ್ಷಣ ನೀರಿನಲ್ಲೂ ಮೆರೆಯುತ್ತಿತ್ತು. ಯಾದವ ಯೋಧರು ಸಾಲ್ವ ಸಹಿತವಾದ ಅದು ಎಲ್ಲೆಲ್ಲಿ ಕಾಣಿಸುತ್ತಿತ್ತೋ ಅಲ್ಲಲ್ಲಿ ಬಾಣ ಹೊಡೆಯುತ್ತಿ ದ್ದರು. ಅವರ ಬಾಣಗಳು ಬೆಂಕಿ, ಸೂರ್ಯರಂತೆ, ವಿಷದ ಹಾವುಗಳಂತೆ ಸಹಿಸಲು ಕಷ್ಟಕರವಾಗಿದ್ದವು. ಅವನ ವಿಮಾನ ಮತ್ತು ಸೈನಿಕರು ತುಂಬ ಪೀಡೆ ಅನುಭವಿಸಬೇಕಾಯಿತು. ಕೊನೆಗೆ ಸಾಲ್ವನೇ ಬಾಣದೇಟು ತಿಂದು ಮೂರ್ಛೆ ಹೋದನು. ಶಾಲ್ವನ ಸೈನಿಕರಿಂದ ಯದುವೀರರೂ ನೋವು ಅನುಭವಿಸ ಬೇಕಾಯಿತು. ಆದರೂ ಯಾರೂ ರಣಭೂಮಿಯನ್ನು ಬಿಟ್ಟು ಓಡಿಹೋಗಲಿಲ್ಲ. 'ಬದುಕಿದರೆ ಭೂಲೋಕ, ಸತ್ತರೆ ಸ್ವರ್ಗಲೋಕ' ಎಂಬುದೇ ಅವರ ರಣ ನೀತಿಯಾಗಿತ್ತು. ಆಗ ಸ್ವಲ್ಪ ಹಿಂದೆ ಪ್ರದ್ಯುಮ್ನನ ಶಸ್ತ್ರಾಘಾತದಿಂದ ಮೂರ್ಛಿತನಾಗಿ ಬಿದ್ದಿದ್ದ ಸಾಲ್ವನ ದ್ಯುಮಂತನೆಂಬ ಸೇನಾಪತಿಯು ಮೂರ್ಛೆಯಿಂದೆಚ್ಚೆತ್ತು ಕಬ್ಬಿಣದ ಗದೆಯಿಂದ ಪ್ರದ್ಯುಮ್ನನಿಗೆ ಪ್ರಹರಿಸಿ ಗರ್ಜಿಸಿದನು. ಈ ಹೊಡೆತವನ್ನು ತಾಳಲಾರದೆ ಪ್ರದ್ಯುಮ್ನನು ಪ್ರಜ್ಞಾಶೂನ್ಯನಾದನು. ದಾರುಕನ (ಶ್ರೀಕೃಷ್ಣನ ಸಾರಥಿಯ) ಮಗನಾದ ಸಾರಥಿಯು ಕೂಡಲೆ ಅವನನ್ನು ಯುದ್ಧರಂಗದಿಂದ ಹೊರಗೆ ತೆಗೆದುಕೊಂಡು ಹೋದನು. ಅವನಿಗೆ ಎಚ್ಚರವಾದಾಗ ತಾನು ರಣ ಭೂಮಿಯಿಂದ ಹೊರಗೆ ಇರುವುದು ತಿಳಿಯಿತು. ಅವನು ಅವಮಾನ, ಸಿಟ್ಟುಗಳಿಂದ ಸಾರಥಿಯನ್ನು ಜರಿದನು. ತಾನು ಹೇಡಿಯಾಗಿದ್ದು ತನ್ನನ್ನೂ ಹೇಡಿಯನ್ನಾಗಿ ಮಾಡಿದ್ದು ತನ್ನ ಕುಲಕ್ಕೆ ಕಳಂಕವೆಂದು ಅಲವತ್ತುಕೊಂಡನು. ತನ್ನಂತಹ ರಣವೀರನು ಯುದ್ಧ ಭೂಮಿಯಿಂದ ಪಲಾಯನ ಮಾಡಿದ್ದು ಅಧರ್ಮವೆಂದು ನೊಂದುಕೊಂಡನು. ಆಗ ಸಾರಥಿಯು ಅವನನ್ನು ಸಮಾಧಾನ ಪಡಿಸಿದನು. ಆಪತ್ತಿನಲ್ಲಿ ಸಿಕ್ಕಿಬಿದ್ದ ರಥಿಕನನ್ನು ಕಾಪಾಡುವುದು ಸಾರಥಿಯ ಧರ್ಮವೆಂಬುದನ್ನು ಮನವರಿಕೆ ಮಾಡಿಕೊಟ್ಟನು. ಇದರಿಂದ ಪ್ರದ್ಯುಮ್ನನಿಗೆ ಸ್ವಲ್ಪ ಸಮಾಧಾನ ವಾಯಿತು.

ಅನಂತರ ಪ್ರದ್ಯುಮ್ನನು ಆಚಮನವನ್ನು ಮಾಡಿ, ಕವಚ, ಧನುಸ್ಸುಗಳನ್ನು ಧರಿಸಿ ದ್ಯುಮಂತನ ಮುಂದೆ ತನ್ನನ್ನು ಕೊಂಡು ಹೋಗುವಂತೆ ಸಾರಥಿಗೆ ಆದೇಶಿಸಿದನು. ತನ್ನ ಸೈನ್ಯವನ್ನು ಹಣ್ಣುಗಾಯಿ-ನೀರುಗಾಯಿ ಮಾಡುತ್ತಿದ್ದ ದ್ಯುಮಂತನನ್ನು ರುಕ್ಮಿಣೀ ಸುತನು ಎಂಟು ಬಾಣಗಳಿಂದ ಪ್ರಹಾರ ಮಾಡಿದನು. ಮತ್ತೆ ನಾಲ್ಕು ಬಾಣಗಳಿಂದ ನಾಲ್ಕು ಕುದುರೆಗಳನ್ನು, ಒಂದು ಬಾಣದಿಂದ ಸೂತನನ್ನು, ಎರಡು ಬಾಣಗಳಿಂದ ಬಿಲ್ಲನ್ನೂ, ಧ್ವಜವನ್ನೂ, ಮತ್ತೊಂದು ಕಣೆಯಿಂದ ಅವನ ತಲೆಯನ್ನೂ ಉರುಳಿಸಿದನು. ಗದ, ಸಾತ್ಯಕಿ, ಸಾಂಬ ಮೊದಲಾದವರು ಸಾಲ್ವನ ಸೈನ್ಯವನ್ನು ಚಚ್ಚಿದರು. ಸೌಭದಲ್ಲಿದ್ದ ಸಾಲ್ವನ ಸೈನಿಕರು ತಲೆ ತುಂಡಾಗಿ ಸಮುದ್ರಕ್ಕೆ ಬಿದ್ದರು. ಈ ರೀತಿ ಸಾಲ್ವ-ಯಾದವರೊಳಗೆ ಇಪ್ಪತ್ತೇಳು ದಿನಗಳವರೆಗೆ ತುಮುಲಯುದ್ಧ ನಡೆಯಿತು.

(ಮುಂದುವರಿಯುವುದು)

## ಹೊಸ ಬೆಳಕು

**ಪುಸ್ತಕ ಪರಿಚಯ :**

**ಲೆಪ್ರೋಸ್ಕೋಪಿಕ್ ಸರ್ಜರಿ**

**(ಉದರದರ್ಶಕ ಶಸ್ತ್ರಚಿಕಿತ್ಸೆಯ ಬಗ್ಗೆ ಮಾಹಿತಿ ಪುಸ್ತಕ)**
**ಲೇಖಕರು :** ಡಾ। ವೈ. ಸುದರ್ಶನ್ ರಾವ್
**ಪ್ರಕಾಶಕರು :** ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚ್ಯಾರಿಟೇಬಲ್ ಟ್ರಸ್ಟ್ (ರಿ.), ಕುಕ್ಕಿಕಟ್ಟೆ, ಉಡುಪಿ.
**ಡಿ.ಟಿ.ಪಿ., ಪುಟ ವಿನ್ಯಾಸ, ಮುಖಪುಟ :** ಶ್ರೀನಿಧಿ ಗ್ರಾಫಿಕ್ ಟೆಕ್, ರಜತಾದ್ರಿ, ಮಣಿಪಾಲ
**ಮುದ್ರಣ :** ಕಲ್ಯಾಣಿ ಪ್ರೆಸ್, ಪೆರ್ಡೂರು

'ಲೆಪ್ರೋಸ್ಕೋಪಿಕ್ ಸರ್ಜರಿ' ಪುಸ್ತಕದ ಲೇಖಕರಾದ ಡಾ। ವೈ. ಸುದರ್ಶನ್ ರಾವ್ 'ಓದುವ ಮುನ್ನ'ದಲ್ಲಿ ಹೀಗೆ ತಿಳಿಸುತ್ತಾರೆ : "ಲೆಪ್ರೋಸ್ಕೋಪಿಕ್ ಸರ್ಜರಿ ಇದು ಒಂದು ಶಸ್ತ್ರಚಿಕಿತ್ಸೆ ಮಾಡುವ ಆಧುನಿಕ ವಿಧಾನ. ಇದನ್ನು ಕನ್ನಡದಲ್ಲಿ ಉದರದರ್ಶಕ ಶಸ್ತ್ರಚಿಕಿತ್ಸೆ ಎಂದು ಕರೆಯುತ್ತೇವೆ. ಜನಸಾಮಾನ್ಯರಲ್ಲಿ 'ಕೀ ಹೋಲ್ ಸರ್ಜರಿ' ಎಂದೂ ಪ್ರಖ್ಯಾತವಾಗಿದೆ...... ಯಾರೂ ಯಾವುದೇ ಖಾಯಿಲೆಯಿಂದ ನರಳಬಾರದು. ಇದು ವೈದ್ಯಲೋಕದ ಧ್ಯೇಯ. ಆದರೂ ಬ್ಯಾಕ್ಟೀರಿಯಾ ಹಾಗೂ ವೈರಸ್‌ಗಳಂತಹ ಸೂಕ್ಷ್ಮಜೀವಿಗಳಿಂದ, ಕಲುಷಿತ ಆಹಾರ, ನೀರು ಹಾಗೂ ಗಾಳಿಯ ಸೇವನೆಯಿಂದ, ಅಪಘಾತಗಳಿಂದ, ಅನುವಂಶಿಕ ಕಾರಣಗಳಿಂದ ಹೀಗೆ ಹಲವಾರು ಕಾರಣಗಳಿಂದ ನಮ್ಮ ಆರೋಗ್ಯಕ್ಕೆ ಧಕ್ಕೆ ಬರುತ್ತದೆ. ಈ ಖಾಯಿಲೆಗಳಲ್ಲಿ ಕೆಲವು ಖಾಯಿಲೆಗಳು ಶಸ್ತ್ರಚಿಕಿತ್ಸೆಯಿಂದ ಮಾತ್ರವೇ ಗುಣವಾಗುವಂತವುಗಳಾಗಿವೆ. ಇಂತಹ ಶಸ್ತ್ರಚಿಕಿತ್ಸೆಯಿಂದ ಮಾತ್ರವೇ ಗುಣವಾಗುವ ಖಾಯಿಲೆಗಳನ್ನು ಆದಷ್ಟು ಸಣ್ಣ ಗಾಯದಲ್ಲಿ, ಆದಷ್ಟು ಕಡಿಮೆ ನೋವಿನಲ್ಲಿ, ರೋಗಿಯನ್ನು ಆದಷ್ಟು ಶೀಘ್ರ ಗುಣಮುಖನಾಗಿಸುವ ಧ್ಯೇಯದೊಂದಿಗೆ ಲೆಪ್ರೋಸ್ಕೋಪಿ ತಂತ್ರಜ್ಞಾನ ಬೆಳೆಯುತ್ತಿದೆ".

ಈ ಪುಸ್ತಕದ ಪ್ರಕಾಶಕರು ತಿಳಿಸುವಂತೆ "ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ಜ್ಯೋತಿಷ್ಕರು ನಮ್ಮ ಕುಟುಂಬದ ಹಿರಿಯರು. ಅವರು ಕಳೆದ ಶತಮಾನದಲ್ಲಿ ಅವಿಭಜಿತ ದ.ಕ. ಜಿಲ್ಲೆಯಲ್ಲಿ ಜ್ಯೋತಿಷಿಗಳಾಗಿ, ಆಯುರ್ವೇದ ವೈದ್ಯರಾಗಿ, ಶಿಕ್ಷಕರಾಗಿ, ವೈದಿಕರಾಗಿ ನಾನಾರಂಗಗಳಲ್ಲಿ ಪ್ರವೀಣರೆನಿಸಿ ಮನೆಮಾತಾಗಿದ್ದವರು. ಅವರ ಜೀವನ ಶೈಲಿಯನ್ನು ಆದರ್ಶವಾಗಿರಿಸಿಕೊಂಡು ನಾವು ನಮ್ಮ ಕುಟುಂಬಿಕರೆಲ್ಲಾ ಸೇರಿ ಈ ಟ್ರಸ್ಟನ್ನು ಆರಂಭಿಸಿರುವೆವು".

ಈ ಪುಸ್ತಕದಲ್ಲಿ 8 ಅಧ್ಯಾಯಗಳಿವೆ. ಮೊದಲ ಅಧ್ಯಾಯ 'ಶಸ್ತ್ರಚಿಕಿತ್ಸೆ ಎಂದರೇನು?'. ಈ ಅಧ್ಯಾಯದಲ್ಲಿ ಲೇಖಕರು ಹೇಳುತ್ತಾರೆ - "ಶಸ್ತ್ರಚಿಕಿತ್ಸೆಯೆಂದರೆ ವೈದ್ಯನು, ಕೆಲವು ಉಪಕರಣ (ಶಸ್ತ್ರ)ಗಳನ್ನು ಬಳಸಿ ಬಾಧೆಗೊಳಗಾದ (Diseased) ಅಂಗದ ಭಾಗವನ್ನು ಕತ್ತರಿಸಿ ತೆಗೆಯುವುದು, ಕತ್ತರಿಸಿ ತೆಗೆದ ನಂತರ ಆ ಅಂಗವು ಮುಂಚಿನಂತೆ ತನ್ನ ಕೆಲಸವನ್ನು ಸಮರ್ಪಕವಾಗಿ ಮುಂದುವರಿಸಿಕೊಂಡು ಹೋಗುವಂತೆ ಮರು ಜೋಡಿಸಿ ಹೊಲಿಯುವುದು, ದೇಹದ ಕೆಲವು ಅಂಗಗಳಲ್ಲಿ ಕಾಣಸಿಗುವ ಕಲ್ಲು, ಗಡ್ಡೆ ಇತ್ಯಾದಿಗಳನ್ನು ತೆಗೆಯುವುದು, ಅಥವಾ ಯಾವುದಾದರೊಂದು ಅಂಗದ ರಚನೆಯಲ್ಲಿ ನ್ಯೂನತೆಯಿದ್ದು ಅದರಿಂದಾಗಿ ಆ ಅಂಗದ ಕಾರ್ಯನಿರ್ವಹಣೆ ಸಮರ್ಪಕವಾಗಿರದಿದ್ದಲ್ಲಿ ಅದಕ್ಕೆ ಹೊಂದಿಕೆಯಾಗುವ ಅವನ ದೇಹದ ಇನ್ನೊಂದು ಭಾಗವನ್ನಾಗಲಿ, ಇನ್ನೊಬ್ಬರ ದೇಹದ ಭಾಗವನ್ನಾಗಲಿ (Grafting) ಅಥವಾ ಕೃತಕ ಭಾಗವನ್ನಾಗಲಿ (Implant) ಅಳವಡಿಸಿ ಆ ನ್ಯೂನತೆಯನ್ನು ಸರಿಪಡಿಸುವುದು, ಹೀಗೆ ಶಸ್ತ್ರಗಳ ಮೂಲಕ ಖಾಯಿಲೆಗಳನ್ನು ಗುಣಪಡಿಸುವುದನ್ನು ಶಸ್ತ್ರಚಿಕಿತ್ಸೆ ಎನ್ನುತ್ತೇವೆ."

'ಲೆಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸಾ ವಿಧಾನದಲ್ಲಿ ಉಪಯೋಗಿಸುವ ಉಪಕರಣಗಳು' ಎಂಬ ಅಧ್ಯಾಯದಲ್ಲಿ ಲೇಖಕರು ಹೀಗೆ ತಿಳಿಸುತ್ತಾರೆ-"'ಲೆಪರೋ' ಅಂದರೆ ಗ್ರೀಕ್ ಭಾಷೆಯಲ್ಲಿ ಹೊಟ್ಟೆ ಎಂದರ್ಥ. ಹಾಗಾಗಿ ಹೊಟ್ಟೆಯೊಳಗಿನ ಅಂಗಗಳನ್ನು ವೀಕ್ಷಿಸಲು ಬಳಸುವ ಟೆಲಿಸ್ಕೋಪನ್ನು 'ಲೆಪ್ರೋಸ್ಕೋಪ್' ಎಂದು ಕರೆಯುತ್ತಾರೆ. ಈ ಲೆಪ್ರೋಸ್ಕೋಪನ್ನು ಬಳಸಿಕೊಂಡು ಶಸ್ತ್ರಚಿಕಿತ್ಸೆ ಮಾಡುವುದರಿಂದ ಈ ವಿಧಾನಕ್ಕೆ ಲೆಪ್ರೋಸ್ಕೋಪಿ ವಿಧಾನ ಎಂಬ ಹೆಸರು ಬಂದಿದೆ."

-ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಆಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ.



## ಶ್ರೀಶಾರದಾ ದೇವಸ್ಥಾನ, ಶ್ರೀಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102

ಶಾರದಾ ಶಾರದಾಂಭೋಜವದನಾ ವದನಾಂಬುಜೇ ।
ಸರ್ವದಾಸರ್ವದಾಽಸ್ಮಾಕಂ ಸನ್ನಿಧಿಂ ಸನ್ನಿಧಿಂ ಕ್ರಿಯಾತ್ ॥

## ಶ್ರೀಶಾರದಾ ದೇವಸ್ಥಾನದಲ್ಲಿ ನವರಾತ್ರಿ ವಿಶೇಷ ಪೂಜೆಗಳು

ತಾ.16-10-2012ರಿಂದ 23-10-2012ರ ವರೆಗೆ ನವರಾತ್ರಿಯ ಪ್ರತಿದಿನ ಶ್ರೀದೇವಸ್ಥಾನದಲ್ಲಿ ಮಧ್ಯಾಹ್ನ 12-30ಕ್ಕೆ ಹಾಗೂ ರಾತ್ರಿ 8-30ಕ್ಕೆ ವಿಶೇಷ ಪೂಜೆ ನಡೆಯಲಿರುವುದು.
ಭಕ್ತಾದಿಗಳು ಪ್ರತಿದಿನ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿ

- ಆಡಳಿತ ಮಂಡಳಿ

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102

## ನವರಾತ್ರಿ ಉತ್ಸವದ ಪ್ರಯುಕ್ತ ನಡೆಯಲಿರುವ ಸ್ಪರ್ಧೆಗಳು

**ತಾ.24-10-2011ನೇ ಬುಧವಾರ ಪೂರ್ವಾಹ್ನ ಗಂಟೆ 9.00 ರಿಂದ ಸಂಜೆ 2.00 ಗಂಟೆಯ ವರೆಗೆ ನಮ್ಮ ಸಮಾಜ ಬಾಂಧವರಿಗಾಗಿ**

| ಸ್ಪರ್ಧೆಗಳು | ವಿಭಾಗಗಳು | | | ಅವಧಿ |
|---|---|---|---|---|
| | 1 | 2 | 3 | |
| **ಭಕ್ತಿಗೀತೆ**<br>ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ<br>(ಯಾವುದೇ ರೀತಿಯ ಸಂಗೀತ ಉಪಕರಣ ಉಪಯೋಗಿಸಬಾರದು.) | 8ನೇ ತರಗತಿಯಿಂದ ಪದವಿಪೂರ್ವ ತರಗತಿ | (4 ನಿಮಿಷ) |
| **ಚಿತ್ರರಚನೆ**<br>ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ<br>(ಯಾವುದೇ ಚಿತ್ರ) | 5-7ನೇ ತರಗತಿಯವರೆಗೆ<br>(ಯಾವುದೇ ದೃಶ್ಯ) | 8ನೇ ತರಗತಿಯಿಂದ ಪದವಿಪೂರ್ವ ತರಗತಿಯ ವಿದ್ಯಾರ್ಥಿಗಳು<br>ಜಗದ್ಗುರು ಶ್ರೀ ಶಂಕರಾಚಾರ್ಯರ ಚಿತ್ರ | (90 ನಿಮಿಷ) |
| **ರಂಗವಲ್ಲಿ** | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ<br>(3×3 ಅಡಿ ಸ್ಥಳಾವಕಾಶದಲ್ಲಿ ಚುಕ್ಕೆ ಹಾಕಿ ರಂಗವಲ್ಲಿ) | 8ನೇ ತರಗತಿಯಿಂದ ಮೇಲ್ಪಟ್ಟ ಎಲ್ಲರಿಗೂ | (90 ನಿಮಿಷ) |
| **ಕಂಠಪಾಠ**<br>ವಿದ್ಯಾರ್ಥಿಗಳಿಗೆ | 7ನೇ ತರಗತಿಯವರೆಗೆ<br>(ಕಂಠಪಾಠ ಸ್ಪರ್ಧೆಯ ಶ್ಲೋಕಗಳನ್ನು ಕೆಳಗೆ ನೀಡಲಾಗಿದೆ. ಈ ಶ್ಲೋಕಗಳಲ್ಲಿ ನಿರ್ಣಾಯಕರು ಕೇಳುವ ಶ್ಲೋಕಗಳನ್ನು ಹೇಳಬೇಕು) | | 8ನೇ ತರಗತಿಯಿಂದ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ | |
| **ಛದ್ಮವೇಷ** (ಏಕವ್ಯಕ್ತಿ)<br>ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ | 8-10ನೇ ತರಗತಿಯವರೆಗೆ | (4 ನಿಮಿಷ) |
| **ಹೂ ಜೋಡಿಸುವುದು**<br>(ಮುಕ್ತ ಅವಕಾಶ) | (ಬೆಳಿಗ್ಗೆ 10.30 ರಿಂದ ಪ್ರಾರಂಭ)<br>ಹೂಗಳನ್ನು ಸ್ಪರ್ಧಿಗಳೇ ತರಬೇಕು. | | | (30 ನಿಮಿಷ) |
| **ಚೂರ್ಣಿಕೆ ಹೇಳುವುದು** | ಎಲ್ಲಾ ವಯಸ್ಸಿನವರಿಗೂ ಮುಕ್ತ ಅವಕಾಶ. | | ಮಧ್ಯಾಹ್ನ ಊಟ ನಡೆಯುತ್ತಿರುವಾಗ ಚೂರ್ಣಿಕೆ ಹೇಳುವುದು | |

ವಿಶೇಷ ಸೂಚನೆಗಳು : 1) ಆಸಕ್ತ ಸ್ಪರ್ಧಾಳುಗಳು ಅದೇ ದಿನ ಬೆಳಿಗ್ಗೆ 8.30ಕ್ಕೆ ಹಾಜರಿದ್ದು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. 2) ರಂಗವಲ್ಲಿಗೆ ಬಣ್ಣದ ಹುಡಿ ಮತ್ತು ಚಿತ್ರ ರಚನೆಗೆ ಕಾಗದ ಹಾಳೆಗಳನ್ನು ಒದಗಿಸಲಾಗುವುದು. ಬೇಕಾದ ಇತರ ಪರಿಕರಗಳನ್ನು ಸ್ಪರ್ಧಾಳುಗಳೇ ತರಬೇಕು. 3) ಹೆಚ್ಚಿನ ನಿಯಮಗಳನ್ನು ಸ್ಪರ್ಧೆ ಆರಂಭವಾಗುವ ಮೊದಲು ಸ್ಪರ್ಧಾಳುಗಳಿಗೆ ತಿಳಿಸಲಾಗುವುದು. 4) ಕನಿಷ್ಠ 3 ಜನ ಸ್ಪರ್ಧಿಗಳು ಇಲ್ಲದಿದ್ದಲ್ಲಿ ಸ್ಪರ್ಧೆ ನಡೆಸುವ ಅಥವಾ ಬಿಡುವ ನಿರ್ಧಾರ ವ್ಯವಸ್ಥಾಪಕರದ್ದು. 5) ಫಲಿತಾಂಶ ನಿರ್ಣಯದಲ್ಲಿ ನಿರ್ಣಾಯಕರ ತೀರ್ಮಾನವೇ ಅಂತಿಮ.

***ಅದೇ ದಿನ ಎಲ್ಲೂರು ಲಕ್ಷ್ಮೀನಾರಾಯಣ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.), ಎಲ್ಲೂರು ಹಾಗೂ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ ಇವರ ಸಹಯೋಗದೊಂದಿಗೆ ನುರಿತ ವೈದ್ಯರಿಂದ ಪೂರ್ವಾಹ್ನ 10 ಗಂಟೆಯಿಂದ ಮಧ್ಯಾಹ್ನದವರೆಗೆ ಉಚಿತ ವೈದ್ಯಕೀಯ ಹಾಗೂ ದಂತ ತಪಾಸಣೆ ನಡೆಸಲಾಗುವುದು. (ಮಧುಮೇಹ, ಇಸಿಜಿ, ರಕ್ತದೊತ್ತಡ, ಕೊಲೆಸ್ಟ್ರಾಲ್ ತಪಾಸಣೆ ಇತ್ಯಾದಿ)***

**ಶ್ರೀಶಾರದಾ ಹವ್ಯಾಸಿ ಯಕ್ಷ ಕಲಾವಿದರು, ಕುಂಜಿಬೆಟ್ಟು, ಉಡುಪಿ ಇವರಿಂದ ಯಕ್ಷಗಾನ “ಮಹಿಷಾಸುರ ಮರ್ದಿನಿ” ಸಮಯ: ಸಂಜೆ 6-00ರಿಂದ 9-00**

ಕಿರಿಯರ ವಿಭಾಗಕ್ಕೆ ಕಂಠಪಾಠ ಸ್ಪರ್ಧೆಗೆ-7ನೇ ತರಗತಿ ವರೆಗೆ

## ಶ್ರೀ ಅನ್ನಪೂರ್ಣಾ ಸ್ತೋತ್ರಂ (ಶ್ರೀ ಶಂಕರಾಚಾರ್ಯ ಕೃತ)

ನಿತ್ಯಾನಂದಕರೀ ವರಾಭಯಕರೀ ಸೌಂದರ್ಯರತ್ನಾಕರೀ
ನಿರ್ಧೂತಾಖಿಲಘೋರಪಾವನಕರೀ ಪ್ರತ್ಯಕ್ಷಮಾಹೇಶ್ವರೀ ।
ಪ್ರಾಲೇಯಾಚಲವಂಶಪಾವನಕರೀ ಕಾಶೀಪುರಾಧೀಶ್ವರೀ
ಭಿಕ್ಷಾಂ ದೇಹಿ ಕೃಪಾವಲಂಬನಕರೀ ಮಾತಾನ್ನಪೂರ್ಣೇಶ್ವರೀ ॥ ೧ ॥

ನಾನಾ ರತ್ನ ವಿಚಿತ್ರಭೂಷಣಕರೀ ಹೇಮಾಂಬರಾಡಂಬರೀ
ಮುಕ್ತಾಹಾರ ವಿಡಂಬಮಾನವಿಲಸದ್ವಕ್ಷೋಜಕುಂಭಾಂತರೀ ।
ಕಾಶ್ಮೀರಾಗರುವಾಸಿತಾ ರುಚಿಕರೀ ಕಾಶೀಪುರಾಧೀಶ್ವರೀ
ಭಿಕ್ಷಾಂ ದೇಹಿ ಕೃಪಾವಲಂಬನಕರೀ ಮಾತಾನ್ನಪೂರ್ಣೇಶ್ವರೀ ॥ ೨ ॥

ಯೋಗಾನಂದಕರೀ ರಿಪುಕ್ಷಯಕರೀ ಧರ್ಮಾರ್ಥನಿಷ್ಠಾಕರೀ
ಚಂದ್ರಾರ್ಕಾನಲಭಾಸಮಾನಲಹರೀ ತ್ರೈಲೋಕ್ಯರಕ್ಷಾಕರೀ ।
ಸರ್ವೈಶ್ವರ್ಯಸಮಸ್ತವಾಂಛಿತಕರೀ ಕಾಶೀಪುರಾಧೀಶ್ವರೀ
ಭಿಕ್ಷಾಂ ದೇಹಿ ಕೃಪಾವಲಂಬನಕರೀ ಮಾತಾನ್ನಪೂರ್ಣೇಶ್ವರೀ ॥ ೩ ॥

ಕೈಲಾಸಾಚಲಕಂದರಾಲಯಕರೀ ಗೌರೀ ಉಮಾ ಶಾಂಕರೀ
ಕೌಮಾರೀ ನಿಗಮಾರ್ಥ ಗೋಚರಕರೀ ಓಂಕಾರ ಬೀಜಾಕ್ಷರೀ ।
ಮೋಕ್ಷದ್ವಾರಕವಾಟಪಾಟನಕರೀ ಕಾಶೀಪುರಾಧೀಶ್ವರೀ
ಭಿಕ್ಷಾಂ ದೇಹಿ ಕೃಪಾವಲಂಬನಕರೀ ಮಾತಾನ್ನಪೂರ್ಣೇಶ್ವರೀ ॥ ೪ ॥

ದೃಶ್ಯಾದೃಶ್ಯಪ್ರಭೂತವಾಹನಕರೀ ಬ್ರಹ್ಮಾಂಡಭಾಂಡೋದರೀ
ಲೀಲಾನಾಟಕಸೂತ್ರಭೇದನಕರೀ ವಿಜ್ಞಾನದೀಪಾಂಕುರೀ ।
ಶ್ರೀ ವಿಶ್ವೇಶಮನಃಪ್ರಸಾದನಕರೀ ಕಾಶೀಪುರಾಧೀಶ್ವರೀ
ಭಿಕ್ಷಾಂ ದೇಹಿ ಕೃಪಾವಲಂಬನಕರೀ ಮಾತಾನ್ನಪೂರ್ಣೇಶ್ವರೀ ॥ ೫ ॥

ಉರ್ವೀ ಸರ್ವಜನೇಶ್ವರೀ ಭಗವತೀ ಮಾತಾನ್ನಪೂರ್ಣೇಶ್ವರೀ
ವೇಣೀನೀಲಸಮಾನಕುಂತಲಧರೀ ನಿತ್ಯಾನ್ನದಾನೇಶ್ವರೀ ।
ಸರ್ವಾನಂದಕರೀ ದಶಾಶುಭಕರೀ ಕಾಶೀಪುರಾಧೀಶ್ವರೀ
ಭಿಕ್ಷಾಂ ದೇಹಿ ಕೃಪಾವಲಂಬನಕರೀ ಮಾತಾನ್ನಪೂರ್ಣೇಶ್ವರೀ ॥ ೬ ॥

ಹಿರಿಯರ ವಿಭಾಗಕ್ಕೆ ಕಂಠಪಾಠ ಸ್ಪರ್ಧೆಗೆ-8ನೇ ತರಗತಿಯಿಂದ ಮೇಲ್ಪಟ್ಟ ಎಲ್ಲರಿಗೂ

## ಲಿಂಗಾಷ್ಟಕ ಸ್ತೋತ್ರಗಳು

ಬ್ರಹ್ಮ ಮುರಾರಿ ಸುರಾರ್ಚಿತಲಿಂಗಂ ನಿರ್ಮಲಭಾಶಿತ ಶೋಭಿತಲಿಂಗಮ್।
ಜನ್ಮಜ ದುಃಖ ವಿನಾಶಕ ಲಿಂಗಂ ತತ್ಪ್ರಣಮಾಮಿ ಸದಾಶಿವಲಿಂಗಮ್ ॥೧॥

ದೇವಮುನಿಪ್ರವರಾರ್ಚಿತಲಿಂಗಂ ಕಾಮದಹಂ ಕರುಣಾಕರಲಿಂಗಮ್।
ರಾವಣದರ್ಪ ವಿನಾಶನಲಿಂಗಂ ತತ್ಪ್ರಣಮಾಮಿ ಸದಾಶಿವಲಿಂಗಮ್ ॥೨॥

ಸರ್ವಸುಗಂಧಿ ಸುಲೇಪಿತಲಿಂಗಂ ಬುದ್ಧಿವಿವರ್ಧನ ಕಾರಣಲಿಂಗಮ್।
ಸಿದ್ಧಸುರಾಸುರ ವಂದಿತಲಿಂಗಂ ತತ್ಪ್ರಣಮಾಮಿ ಸದಾಶಿವಲಿಂಗಮ್॥೩॥

ಕನಕಮಹಾಮಣಿಭೂಷಿತ ಲಿಂಗಂ ಫಣಿಪತಿವೇಷ್ಟಿತ ಶೋಭಿತಲಿಂಗಮ್।
ದಕ್ಷ ಸುಯಜ್ಞ ವಿನಾಶನಲಿಂಗಂ ತತ್ಪ್ರಣಮಾಮಿ ಸದಾಶಿವಲಿಂಗಮ್॥೪॥

ಕುಂಕುಮಚಂದನ ಲೇಪಿತಲಿಂಗಂ ಪಂಕಜಹಾರ ಸುಶೋಭಿತಲಿಂಗಮ್॥೧॥
ಸಂಚಿತಪಾಪವಿನಾಶನ ಲಿಂಗಂ ತತ್ಪ್ರಣಮಾಮಿ ಸದಾಶಿವಲಿಂಗಮ್॥೫॥

ದೇವಗಣಾರ್ಚಿತ ಸೇವಿತಲಿಂಗಂ ಭಾವೈರ್ಭಕ್ತಿಭಿರೇವ ಚ ಲಿಂಗಮ್।
ದಿನಕರಕೋಟಿ ಪ್ರಭಾಕರಲಿಂಗಂ ತತ್ಪ್ರಣಮಾಮಿ ಸದಾಶಿವಲಿಂಗಮ್॥೬॥

ಅಷ್ಟದಲೋಪರಿವೇಷ್ಟಿತ ಲಿಂಗಂ ಸರ್ವಸಮುದ್ಭವಕಾರಣ ಲಿಂಗಮ್।
ಅಷ್ಟದರಿದ್ರವಿನಾಶಿನಲಿಂಗಂ ತತ್ಪ್ರಣಮಾಮಿ ಸದಾಶಿವಲಿಂಗಮ್॥೭॥

ಸುರಗುರುಸುರವರ ಪೂಜಿತಲಿಂಗಂ ಸುರವನಪುಷ್ಪಸದಾರ್ಚಿತ ಲಿಂಗಮ್।
ಪರಾತ್ಪರಂ ಪರಮಾತ್ಮಕಲಿಂಗಂ ತತ್ಪ್ರಣಮಾಮಿ ಸದಾಶಿವಲಿಂಗಮ್॥೮॥

# ಪ್ರಸವ ಪೂರ್ವ ಲಿಂಗ ಪರೀಕ್ಷೆ



- ಪ್ರಗತಿ ಭಂಡಿ ಪೆರ್ಡೂರು
(ಪ್ರಥಮ ಪಿ.ಯು.ಸಿ, ಪೂರ್ವಪ್ರಜ್ಞಾ ಕಾಲೇಜು, ಉಡುಪಿ)

**(ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರು ಆಯೋಜಿಸಿದ ಜಿಲ್ಲಾ ಮಟ್ಟದ ಭಾಷಣ ಸ್ಪರ್ದೆಯಲ್ಲಿ ಪ್ರಥಮ ಬಹುಮಾನ)**

ಪರೀಕ್ಷೆ ಎಂದರೆ ಭಯ. ಅದರಲ್ಲೂ ಪೂರ್ವ ಪರೀಕ್ಷೆ ಎಂದರೆ ಇನ್ನೂ ಭಯ. ಪ್ರಸವ ಪೂರ್ವಲಿಂಗ ಪರೀಕ್ಷೆ ಎಂದರೆ ಏನು ಹೇಳುವುದು? ಮರಣಭಯ, ಹೌದು, ಅದಕ್ಕಿಂತ ದೊಡ್ಡ ಭಯ ಇನ್ನೇನಿದೆ?

'ಪ್ರಸವ ಪೂರ್ವ ಲಿಂಗ ಪರೀಕ್ಷೆ' ಎಂದರೆ ವೈಜ್ಞಾನಿಕವಾಗಿ, ವೈದ್ಯಕೀಯವಾಗಿ ಏನು ಪ್ರಯೋಜನವೋ ಎನ್ನುವುದರ ವಿಚಾರ ನಾನು ಮಾತನಾಡುವುದಿಲ್ಲ. ಯಾವುದೋ ನೆಲೆಯಲ್ಲಿ ಅದಕ್ಕೊಂದು ಬೆಲೆ ಇರಬಹುದು. ಅವಶ್ಯಕತೆಗೆ ಅನುಗುಣವಾಗಿ ಅದರ ಅಗತ್ಯವಿರಬಹುದು. ಆದರೆ ಅದೇಕೆ ಇಂದು ಮನುಕುಲಕ್ಕೆ ಬಡಿದ ಶಾಪವಾಗಿದೆ? ಏಕೆ ಸಂಸಾರಿಗಳು ಭ್ರೂಣ ಪರೀಕ್ಷೆ ಮಾಡಿಸಿಕೊಂಡು, ಭ್ರೂಣಹತ್ಯೆಯ ಪಾಪವನ್ನು ಹೊತ್ತುಕೊಂಡು ನರಕಕ್ಕೆ ಹೋಗುತ್ತಿದ್ದಾರೆ? ಏಕೆ ತಮ್ಮ ಬಾಳು, ಭವಿಷ್ಯವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ? ಭ್ರೂಣ ಹತ್ಯೆ ಎಂದರೆ ತಮ್ಮನ್ನೇ ತಾವು ಆತ್ಮಹತ್ಯೆ ಮಾಡಿಕೊಂಡಂತೆ ಎಂದೇಕೆ ಅವರು ತಿಳಿದುಕೊಳ್ಳುವುದಿಲ್ಲ? ಅವರಿಗೇಕೆ 'ಜೀವನ' ಎಂದರೆ ಏನು ಎಂದು ಅರ್ಥವೇ ಆಗುವುದಿಲ್ಲ?

'ಅಷ್ಟಪುತ್ರವತೀ ಭವ' ಎಂದು ಹೆಣ್ಣಿಗೆ ಮದುವೆಯ ಸಂದರ್ಭದಲ್ಲಿ ವೇದಕಾಲದ ಆಶೀರ್ವಾದವಿತ್ತು. ಈಗ 'ಆರತಿ'ಗೊಂದು 'ಕೀರುತಿ'ಗೊಂದು ಎಂದಾಗಿದೆ. ಪ್ರಸವ ಪೂರ್ವಲಿಂಗ ಪರೀಕ್ಷೆ ಎಂಬ ಒಂದು ಮಾರಕಾಸ್ತ್ರದಿಂದಾಗಿ ಇಂದು ಆರತಿಗೆ ಬೇಡ, ಕೀರುತಿಗೆ ಮಾತ್ರಸಾಕು ಎಂದು ಸಾಕ್ಷರಾಂಕಿತ ಮನುಷ್ಯ ಇಂದು ರಾಕ್ಷಸರಿಗಿಂತಲೂ ಕೆಟ್ಟವನಾಗಿ ಕಾಣಿಸಿಕೊಳ್ಳುತ್ತಿದ್ದಾನೆ.

ಲಿಂಗ ಪರೀಕ್ಷೆಯನ್ನು ಪ್ರಕೃತಿಯೇ ಮಾಡುತ್ತಿದೆ. ಅದಕ್ಕೆ ಹಿಂದಿನವರು ಹೇಳುತ್ತಿದ್ದದ್ದು ಎಷ್ಟು ಮಕ್ಕಳಾದರೂ ಯಾವ ಮಕ್ಕಳಾದರೂ ದೇವರು ಕೊಟ್ಟದ್ದು ಎಂದು. ಅದರಲ್ಲೂ ಹೆಣ್ಣು ಮಕ್ಕಳಾದರೆ ಎಂಥ ಸಂಭ್ರಮ, ಸಂತೋಷ, ಮಹಾಲಕ್ಷ್ಮಿಯೇ ಇಳಿದು ಬಂದಂತೆ! ನಮ್ಮ ಋಷಿಗಳು ಹೆಣ್ಣನ್ನು ಜಗತ್ತಿನ ಕಣ್ಣು ಎಂದು ಕಂಡುಕೊಂಡರು. ಹೆಣ್ಣು ಆದಿಪರಾಶಕ್ತಿ, ಓಂಕಾರಸ್ವರೂಪಿಣಿ, ಅನ್ನಪೂರ್ಣೇಶ್ವರಿ, ಭುವನೇಶ್ವರಿ, ಬ್ರಹ್ಮಾಂಡಸ್ವರೂಪಿಣಿ. ಆಕೆಯಿಂದಲೇ ಎಲ್ಲ ದೇವತೆಗಳು ಹುಟ್ಟಿಕೊಂಡರು. ಜೀವಜಾಲವೇ ಅವಳಿಂದ ಉಂಟಾಗಿದೆ. ಅಪುತ್ರಸ್ಯ ಗತಿರ್ನಾಸ್ತಿ ಎಂದು ಪುತ್ರ ಸಂತಾನವಿಲ್ಲದವರಿಗೆ ಮೋಕ್ಷವಿಲ್ಲ ಎಂಬ ಮಾತಿದೆ? ಆ ಮಾತಿಗೆ ಗಂಡು ಮಗು ಎಂದೇ ಅರ್ಥವಲ್ಲ, ಹೆಣ್ಣು ಮಗೂ ಮೋಕ್ಷಕ್ಕೆ ದಾರಿಯಾಗುತ್ತಾಳೆ. ಅಧ್ಯಾತ್ಮ ಬಲ್ಲವರಿಗೆ ಮಾತ್ರ ಇದು ಗೊತ್ತು.

ಅನಸೂಯ, ಅರುಂಧತಿ, ಗಾರ್ಗಿ ಹೀಗೆ ಎಂಥೆಂಥ ಹೆಣ್ಣು ಮಕ್ಕಳು ಹುಟ್ಟಿ ಅಮರರಾದರು ಎನ್ನುವುದನ್ನು ಒಮ್ಮೆ ನೆನೆದರೆ ಸಾಕು, ಯಾರು ಕ್ರೂರವಾದ, ಘನಘೋರ ಭಯನಕವಾದ ಅಕ್ಷಮ್ಯ ಅಪರಾಧವಾದ ಇಂಥ ಪ್ರಸವಪೂರ್ವ ಭ್ರೂಣಪರೀಕ್ಷೆ ಮಾಡಿಸಿಕೊಂಡು ಹೆಣ್ಣು ಸಂತಾನವೆ ಭೂಮಿಗಿಳಿದು ಬಾರದಂತೆ ನೋಡಿಕೊಳ್ಳುತ್ತಿರಲಿಲ್ಲ. ದಟ್ಟದರಿದ್ರಾವಸ್ಥೆಯನ್ನು ತಂದುಕೊಳ್ಳುತ್ತಿರಲಿಲ್ಲ. ಹೆಣ್ಣಿಲ್ಲದೆ ಗಂಡು ಪರದಾಡುವ ಅತಂತ್ರ ಸ್ಥಿತಿಗೆ ಕಾರಣೀಭೂತರಾಗುತ್ತಿರಲಿಲ್ಲ. ಒಟ್ಟಿನಲ್ಲಿ ದೂರಾಲೋಚನೆ ಇಲ್ಲದ ದುರಾಲೋಚನೆಯಲ್ಲಿ ಭವಿಷ್ಯದ ಭ್ರೂಣವನ್ನೇ ಕಿತ್ತು ಹಾಕುತ್ತಿರಲಿಲ್ಲ.

ಈಗ ನಾವು ಯೋಚಿಸಬೇಕಾದ ಕಾಲ ಬಂದಿದೆ. ಇನ್ನಾದರೂ ನಾವು ಎಚ್ಚೆತ್ತುಕೊಂಡು ಹೆಣ್ಣು ಭ್ರೂಣವನ್ನು ಉಳಿಸದೇ ಹೋದರೆ ಅದನ್ನೇ ಮುಂದೆ ಬರುವ ಪ್ರಳಯ ಎಂದು ಧಾರಾಳವಾಗಿ ಕರೆಯಬಹುದು.

ನಾವು ಈಗಲಾದರೂ ನಮ್ಮಷ್ಟಕ್ಕೇ ಆತ್ಮಾವಲೋಕನವನ್ನು ಮಾಡಿಕೊಳ್ಳೋಣ. ನಮಗೆ ಏನು ಕಡಿಮೆ ಆಗಿದೆ? ಪಂಚೇಂದ್ರಿಯಗಳಿವೆ, ಪಂಚಭೂತಗಳಿವೆ. ಎಲ್ಲವೂ ನಮ್ಮ ಸುಖಕ್ಕಾಗಿಯೇ ಇವೆ. ನಮ್ಮ ಕೈಕಾಲುಗಳಲ್ಲಿ ಐದೈದು ಬೆರಳುಗಳಿವೆ. ಕಿರುಬೆರಳು ಬೇಡ, ಉಳಿದ ಬೆರಳುಗಳು ಸಾಕು ಎಂದರೆ? ಹಾಗೆಯೇ ಹೆಣ್ಣು ಬೇಡ, ಗಂಡು ಮಗು ಮಾತ್ರಬೇಕು ಎಂದರೆ? ಜೀವನ ನಡೆದೀತೆ? ನಮ್ಮ ಜೀವನದಲ್ಲಿ ಇಂದು ಪ್ರೀತಿಯ ಕೊರತೆ ಇದೆ. ಅದರಿಂದಾಗಿಯೇ ಪ್ರಸವಪೂರ್ವ ಲಿಂಗ ಪರೀಕ್ಷೆಗಳಂಥ ಅನಿಷ್ಟಗಳು ಒಂದು ತಾಂಡವದಾಡುತ್ತಿವೆ. ಇವುಗಳ ಅಟ್ಟಹಾಸವನ್ನು ನಿಲ್ಲಿಸಬೇಕು. ಇದು ಗಂಡಿನಿಂದ ಸಾಧ್ಯವಾಗುತ್ತಿಲ್ಲ ಎಂದಾದರೆ ಹೆಣ್ಣೇ ಮಹಾಕಾಳಿಯಾಗಿ ವಿವೇಕದ ತ್ರಿಶೂಲವನ್ನು ಎತ್ತಿಕೊಂಡು ಬರಬೇಕು. ಒಟ್ಟಿನಲ್ಲಿ ಹೆಣ್ಣುಗಂಡು ಎಂದರೆ ಸಂಸಾರ ಮುಖದ ಎರಡು ಕಣ್ಣುಗಳಾಗಬೇಕು. ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಯಾರಾದರೂ ಹಾಕುತ್ತಾರೇನು? ಹಾಗೆ ಹಾಕಿದರೆ ಅದೇ ಪ್ರಸವ ಪೂರ್ವ ಲಿಂಗ ಪರೀಕ್ಷೆ!

# 'ಚಾಟಿ - ಚಟಾಕಿ'-4

- ಮಾರ್ಪಳ್ಳಿ ಆರ್ ಮಂಜುನಾಥ್



ಅಪರೂಪಕ್ಕೊಮ್ಮೆ ಬೆಂಗಳೂರಿಂದ ನಮ್ಮ ಹಳೆ ಸಂಬಂಧಿಗಳು ಕುಟುಂಬ ಸಮೇತ ನಮ್ಮೂರಿಗೆ ಬಂದಿದ್ದರು. ಶ್ರೀಮಂತ ಎಜುಕೇಟೆಡ್ ಫ್ಯಾಮಿಲಿ ಜೊತೆಯಲ್ಲಿ ಕಾನ್ವೆಂಟ್‌ನಲ್ಲಿ ಓದುತ್ತಿದ್ದ ಅವರ ಮಕ್ಕಳು ಬಂದಿದ್ದರು. ನಮ್ಮ ಮಕ್ಕಳಿಗೂ ಬಲು ಆನಂದವಾಗಿತ್ತು. ತಮ್ಮ ವಯಸ್ಸಿನ ಮಕ್ಕಳ ಕಂಡೊಡನೆ ಆಡುವ-ಕುಣಿಯುವ ತವಕ, ಆ ಮಕ್ಕಳಿಗೂ ಅಷ್ಟೇಕ್ಷಣದಲ್ಲಿಯೇ ಎಲ್ಲರೂ ಫ್ರೆಂಡ್‌ಗಳಾಗಿ ಹೋಗಿದ್ದರು.

ಒಂದರ್ಧ ಘಂಟೆಯಾಗಿರಬಹುದು, ಬೆಂಗಳೂರಿಂದ ಬಂದ ಮಕ್ಕಳು ನಮ್ಮ ಮಕ್ಕಳು ಕೊಟ್ಟಿದ್ದ ಆಟಿಕೆ ಸಾಮಾನುಗಳನ್ನು ಕೈಯಲ್ಲಿ ಹಿಡಿದುಕೊಂಡು ಒಂದು ಖುಷಿಯಿಂದ ಹೇಳಿದರು.

ಬಂದ ನೆಂಟರು ಮುಖ ಸಿಂಡರಿಸಿಕೊಂಡು ''ಛೀ ಡರ್ಟಿ ಗೊಂಬೆಗಳು. ಬಿಸಾಡು, ಇದನ್ನು ಬೆಂಗಳೂರಿಗೆ ತೆಗೆದುಕೊಂಡು ಬರ್ತೀಯಾ? ನಿನಗೆ ಎಷ್ಟೆಷ್ಟು ಸಾವಿರ ರೂ.ಗಳ ಆಟದ ಗೊಂಬೆಗಳನ್ನು ಕೊಡಿಸಿದ್ದೇವೆ. ನಿನಗೆ ಶೇಮ್ ಆಗೋದಿಲ್ವೇ'' ಎಂದರು.

ಅವರ ಮಾತು ಕೇಳಿ ನನಗೆ ಶಾಕ್ ಆಯಿತು. ಪಾಪ ಆ ಪುಟ್ಟ ಮಕ್ಕಳಿಗೆ ಗೊಂಬೆಯ ಬೆಲೆ ಮುಖ್ಯವೋ? ಗೊಂಬೆಯ ಆಕರ್ಷಣೆ ಮುಖ್ಯವೋ? ಅದು ಅಲ್ಲದೆ ಆ ಎಳೆಯ ಮಕ್ಕಳಲ್ಲಿ ಹಣದ ದೌಲತನ್ನು ತುಂಬುವ ಎಂಥಹ ಕೆಟ್ಟ ಮನೋಭಾವ? ಎಂಥ ಸಂಸ್ಕೃತಿ! ಅನಿಸಿತು.

ಸಾಮಾನ್ಯವಾಗಿ ದುಡಿದ ಬಹಳ ಮಂದಿ ಮಾಡುವುದೇ ಹೀಗೆ. ಮಕ್ಕಳಿಗೆ ಹೆಚ್ಚಿನ ಬೆಲೆಯ ಆಟಿಕೆ ಕೊಡಿಸುವುದು ಅವರ ಪ್ರತಿಷ್ಠೆ. ತಮ್ಮ ಮಕ್ಕಳು ಕಳಪೆ ಮಟ್ಟದ ಅಥವಾ ಕಡಿಮೆ ಬೆಲೆಯ ಆಟಿಕೆಗಳಲ್ಲಿ ಆಡಬಾರದು, ಮುಟ್ಟಬಾರದು, ತಮ್ಮ ಡಿಗ್ನಿಟಿಗೆ ಅವಮಾನ!

ಎಳೆಯ ವಯಸ್ಸಿನಲ್ಲಿಯೇ ಆ ಪುಟ್ಟ ಮಕ್ಕಳಲ್ಲಿ ಅಹಂ-ತಾರತಮ್ಯತೆ, ಶ್ರೀಮಂತಿಕೆ ತುಂಬುವ ಇಂತಹ ದೊಡ್ಡವರೇ ಸಮಾಜಕ್ಕೆ ಮಾರಕರು.

ಅಷ್ಟೇ ಅಲ್ಲ ತಮ್ಮ ಮಕ್ಕಳು ತಮಗಿಂತ ಬಡಮಕ್ಕಳ ಜೊತೆಗೆ ಆಡಬಾರದು, ಸ್ನೇಹ ಮಾಡಬಾರದು, ಏನಿದ್ದರೂ ತಮ್ಮ ಅಂತಸ್ಥಿಗೆ ಸಮನಾದ, ಅದಕ್ಕೂ ಮಿಗಿಲಿನ ಶ್ರೀಮಂತ ಮಕ್ಕಳು ಸ್ನೇಹ ಮಾಡಬೇಕು, ಆಡಬೇಕು, ಹಾಡಬೇಕು ಇಂತಹ ದೃಷ್ಟಿಕೋನ ಅವರುಗಳದು.

ಇತ್ತೀಚೆಗಂತೂ ತಮ್ಮ ಮಕ್ಕಳಿಗೆ ಇಷ್ಟವಿರಲಿ, ಇಲ್ಲದಿರಲಿ, ಇಂಗ್ಲೀಷ್‌ನಲ್ಲಿಯೇ ಅವರುಗಳು ಮಾತನಾಡಬೇಕು. ಇಂಗ್ಲೀಷ್ ಕಾನ್ವೆಂಟ್‌ಗೆ ಸೇರಿಸಬೇಕು. ಮಕ್ಕಳು ಇಂಗ್ಲೀಷ್ ಮಾತನಾಡುತ್ತಿದ್ದರೆ, ಆಹಾ! ತಂದೆ-ತಾಯಿಗಳ ಮುಖದಲ್ಲಿ ಕಾಣುವ ಸಂತೋಷ-ಸಂಭ್ರಮ ಹೇಳತೀರದು.

ನನ್ನಂತ ಕನ್ನಡದ ಕವಿಗಳು, ಕನ್ನಡ ಅಭಿಮಾನವಿರಿಸಿ ಕನ್ನಡ ಓದುವ ಮಕ್ಕಳ ಮನಸ್ಸಿನ ಭಾವನೆಯನ್ನು ಈ ರೀತಿ ವ್ಯಕ್ತಪಡಿಸಿದ್ದೇವೆ. ಇದು ಕವಿಯ ಕನ್ನಡದ ಪ್ರೇಮವೋ? ಅಥವಾ ಭಾವನೆಯೋ? ಓದುಗರೇ ನಿರ್ಧರಿಸಬೇಕು.

*''ಕನ್ನಡ ಮಾತಾಡೋ ನಮ್ಮನ್ನು ಕಂಡ್ರೆ, ನಿಮಗೇಕೆ ಎಂದೂ ತಾತ್ಸಾರ?*

*ಇಂಗ್ಲೀಷ್ ಮಾತಾಡೋ ಮಕ್ಕಳನ್ನು ಕಂಡ್ರೆ ನಿಮಗೇಕೆ ಬಂತು ಮಮಕಾರ?*

*ಇಂಗ್ಲೀಷ್ ಮಾತಾಡಿದ್ರೆ ಬುದ್ಧಿವಂತರು ಅಂತ ನಿಮಗೇಕೆ ಬಂತು ಭಾವನೆ?*

*ಕನ್ನಡ ಮಾತಾಡಿದ್ರೆ ದಡ್ಡರು ಅಂತ ನಿಮಗೇಕೆ ಬಂತು ಕೀಳರಿಮೆ?''*

ಈ ಕವನ ಕೇವಲ ಕಲ್ಪನೆ, ನಿಜವಲ್ಲ ಎಂದು ಸಾರಾಸಗಟು ತಳ್ಳಿಹಾಕುವುದು ಬೇಡ. ನಾವು ನಮಗರಿಯದಂತೆ ಇಂಗ್ಲೀಷಿನ ವ್ಯಾಮೋಹಕ್ಕೆ ಒಳಗಾಗಿ ನಮ್ಮ ಮಕ್ಕಳನ್ನು ಪರಭಾಷೆಯಲ್ಲಿಯೇ ಬೆಳೆಸಲು ನೋಡುತ್ತಿದ್ದೇವೆ. ಅದನ್ನು ಗ್ರೇಟ್ ಅಂತ ತೀರ್ಮಾನಿಸಿದ್ದೇವೆ.

ನಮ್ಮ ಸಂಸ್ಕೃತಿ-ಸಂಸ್ಕಾರಕ್ಕಿಂತ ಪರಭಾಷೆ-ಪರರ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿ ನಮ್ಮ ಮಕ್ಕಳನ್ನು ಆ ಹಾದಿಯಲ್ಲಿ ಸಾಗಲು ಬಲಾತ್ಕರಿಸುತ್ತಿದ್ದೇವೆ. ನಮ್ಮ ಸಂಸ್ಕೃತಿಯಲ್ಲಿ ಬೆಳೆದ ಮಕ್ಕಳನ್ನು ತಾತ್ಸಾರದಿಂದಲೋ, ಅಸಮಾನತೆಯ ಮಾನಗಳಿಂದಲೋ ಕಾಣುತ್ತಿದ್ದೇವೆ.

ಸಾಮಾನ್ಯವಾಗಿ ಮಕ್ಕಳಲ್ಲಿ ತಾರತಮ್ಯವನ್ನು-ಅಸಮಾನತೆಯ ಮನೋಭಾವವನ್ನು ಹುಟ್ಟು ಹಾಕುತ್ತಿರುವವರು ದೊಡ್ಡವರೆನಿಸಿದ ನಾವುಗಳೇ!

'ಬೆಳೆಯುವ ಸಿರಿ ಮೊಳಕೆಯಲ್ಲೇ'-ಎನ್ನುವ ನಾಣ್ನುಡಿ ಹೇಳುವ ನಾವುಗಳು ಮೊಳಕೆಯಲ್ಲಿನ ಸಸಿಗಳನ್ನು ಸರಿಯಾಗಿ ಬೆಳೆಸುತ್ತಿದ್ದೇವೆಯೇ ಎಂಬ ಪ್ರಶ್ನೆಗಳನ್ನು ನಮಗೆ ನಾವೇ ಹಾಕಿಕೊಳ್ಳಬೇಕಾಗಿದೆ.

ಸಾಮಾನ್ಯವಾಗಿ ಇಂದು ತಂದೆ-ತಾಯಿಗಳು ಕೆಲಸಕ್ಕೆ ಹೋಗುವವರೇ ಜಾಸ್ತಿ. ಮಕ್ಕಳನ್ನು ನೋಡಿಕೊಳ್ಳಲು ಅಜ್ಜ ಅಜ್ಜಿಯರುಗಳು ಇಲ್ಲದ ವಿಭಕ್ತ ಕುಟುಂಬ. ಮಕ್ಕಳ ಯೋಗಕ್ಷೇಮವನ್ನು, ಅವರ ದೈನಂದಿನ ಚಟುವಟಿಕೆಗಳನ್ನು ನೋಡಲು ಸಮಯವಿಲ್ಲದ ಯಾಂತ್ರಿಕತೆ. ಇದು ಹೆಚ್ಚಾಗಿ ಮಧ್ಯಮವರ್ಗ ಮತ್ತು ಶ್ರೀಮಂತ ವರ್ಗಗಳಲ್ಲಿ ಜಾಸ್ತಿ.

ಶ್ರೀಮಂತ ವರ್ಗದಲ್ಲಂತೂ ಮಕ್ಕಳಿಗೆ ಸಾಕಷ್ಟು ಹಣ ಖರ್ಚು ಮಾಡಿ ಬೋರ್ಡಿಂಗ್ ಶಾಲೆಗೆ ಸೇರಿಸಿ ಕೈ ತೊಳೆದುಕೊಂಡರೆ ತಮ್ಮ ಕೆಲಸವಾಯಿತೆಂಬ ಧನ್ಯಭಾವ. ಆ ಶ್ರೀಮಂತ ಪ್ರಪಂಚದಲ್ಲಿ, ನಾಗರೀಕತೆಯ ಯಾಂತ್ರಿಕ ಬದುಕಿನಲ್ಲಿ ಮುಳುಗಿದ ಅವರಿಗೆ ಮಕ್ಕಳ ಯೋಗಕ್ಷೇಮ ಕಣ್ಣಿಗೆ ಬೀಳುವುದೇ ಅಪರೂಪ. ಅವರಿಗೆ ಪುರುಸೊತ್ತು ಆದಾಗ ಮಕ್ಕಳೊಂದಿಗೆ ಬೆರೆಯುವುದು ಕೆಲವೇ ಕ್ಷಣ.

ಇನ್ನೂ ಬೆಂಗಳೂರಿನಂತ ಮಹಾನಗರಿಗಳಲ್ಲಿ ಗಂಡ-ಹೆಂಡತಿ ಬೆಳಿಗ್ಗೆ ಮನೆ ಬಿಟ್ಟರೆ ರಾತ್ರಿ ಎಷ್ಟೋ ಗಂಟೆಗೆ ಮನೆ ಸೇರುವುದು. ಮಕ್ಕಳ ಆರೈಕೆ, ಅವರ ಕಲಿಕೆ-ಬೆಳವಣಿಗೆಯ ಬಗ್ಗೆ ಗಮನ ಹರಿಸಲು ವ್ಯವಧಾನವಿಲ್ಲದೆ ಮಲಗಿದರೆ ಸಾಕೆಂಬ ಸ್ಥಿತಿ. ಇನ್ನು ಅವರ ಮಕ್ಕಳ ಬೆಳವಣಿಗೆ-ಪ್ರಗತಿಯನ್ನು ಯಾರು ನೋಡುತ್ತಾರೋ? ಪ್ರೀತಿಯನ್ನು ಹರಿಸುತ್ತಾರೋ? ದೇವರೇ ಬಲ್ಲ!

ಆದರೆ ನಮ್ಮ ಹಿರಿಯರಿಗೆ-ಪೋಷಕರಿಗೆ ಮಕ್ಕಳ ಬಗ್ಗೆ ವೈಯಕ್ತಿಕ ಕಾಳಜಿ. ಕಾಲ ಕಳೆಯಲು ಪುರಸೊತ್ತು ಅಥವಾ ಮನಸ್ಸಿನ ಅಭಾವವಿದ್ದರೂ, ತಮ್ಮ ಮಕ್ಕಳು ತಮಗೆ ವಿಧೇಯರಾಗಿರಬೇಕು, ಬುದ್ಧಿವಂತರಾಗಿರಬೇಕು, ಬೇರೆಯವರ ಮಕ್ಕಳಿಗಿಂತ ತಮ್ಮ ಮಕ್ಕಳೇ ಎಲ್ಲದರಲ್ಲೂ ಮುಂದಿರಬೇಕು. ಅದಕ್ಕಾಗಿ ನಾವು ಎಷ್ಟೇ ಹಣ ಖರ್ಚು ಮಾಡಲು ಸಿದ್ಧವೆಂಬ ಮಾತು. ಆದರೆ ಮಕ್ಕಳ ಜೊತೆ ಪ್ರೀತಿಯಿಂದ ಕಾಲಕಳೆಯಲು ಅವರಿಗೆ ಸಮಯವಿಲ್ಲ.

ಇತ್ತೀಚೆಗಂತೂ ಮಕ್ಕಳ ಆಟ-ಪಾಠಗಳಲ್ಲೂ ಬಹಳಷ್ಟು ಬದಲಾಗಿದೆ. ನಮ್ಮ ಹಿಂದಿನ ಆಟ-ಪಾಠಗಳು ಮರೆಯಾಗಿದೆ. ಇತ್ತೀಚಿನ ಶಾಲೆಗಳಲ್ಲಿನ ಫ್ಯಾಷನ್ ಎಂದರೆ ಯೂನಿಫಾರಂ, ಶಾಲೆಗಳ ಭವ್ಯ ಕಟ್ಟಡಗಳು, ಕಂಪ್ಯೂಟರ್, ಟಿ.ವಿ.ಗಳಲ್ಲಿ ಪಾಠ ಇನ್ನು ಏನೇನು? ಆದರೆ ಎಲ್ಲೂ ಇಲ್ಲ ಆರ್ದ್ರತೆ, ಪ್ರೀತಿ ವಾತ್ಸಲ್ಯಗಳ ಮಧು ಸಿಂಚನ.

ಅಂದ ಮಾತ್ರಕ್ಕೆ ಹಿಂದಿನ ಕಾಲದಲ್ಲಿದ್ದ ಗುರುಕುಲದಂತೆ ಗುಡಿಸಲು, ಅರಳಿಕಡ್ಡಿ ಆರಿಸಿ ತರುವುದು, ಚಾಪೆ ಮೇಲೆ ಮಲಗುವುದು, ಕಠಿಣ ಅಭ್ಯಾಸ ಮಾಡಬೇಕೆಂದಿಲ್ಲ. 'ಋಷಿ ವಾಕ್ಯದೊಡನೆ-ವಿಜ್ಞಾನ ಕಲೆಮೇಳವಿಸೆ' ವಿದ್ಯಾಭ್ಯಾಸ, ನಮ್ಮ ಮಕ್ಕಳಿಗೆ ಇರಲಿ. ಶ್ರೀಮಂತರ ಮಕ್ಕಳೇ ಇರಲಿ, ಸಾಮಾನ್ಯ ಮಕ್ಕಳೇ ಇರಲಿ ಒಂದೇ ಸೂರಿನಡಿಯಲ್ಲಿನ ವಿದ್ಯಾಭ್ಯಾಸವಿತ್ತಲ್ಲ. ಆ ರೀತಿ ಇಂದಿನ ಡೊನೇಷನ್ ಹಾವಳಿ ತಪ್ಪಿ ಶ್ರೀಮಂತ ಮಕ್ಕಳಿರುವ ಶಾಲೆಯಲ್ಲಿ ಕಡ್ಡಾಯವಾಗಿ ಬಡಮಕ್ಕಳಿಗೆ ವಿದ್ಯಾಭ್ಯಾಸ ಕೊಡಲೇ ಬೇಕೆನ್ನುವ ನಿಟ್ಟಿನಲ್ಲಿ ಕ್ರಮಕೈಗೊಂಡರೆ ತಾರತಮ್ಯವೆನ್ನುವುದಕ್ಕೆ ಕಿಂಚಿತ್ತು ಕಡಿವಾಣ ಹಾಕಬಹುದೇನೋ? ಚಿಂತನೆಗೆ ಇದೊಂದು ಹೆಜ್ಜೆಯಾಗಬಹುದೇ?

# ಹರ್ಷಕುಮಾರ್ ಕೇದಗೆ ಇವರ ಸಾಧನೆಗೆ ಸನ್ಮಾನ




ಶ್ರೀಯುತ ಹರ್ಷಕುಮಾರ್ ಕೇದಗೆಯವರಿಗೆ, 1986ರಿಂದ ಮಂಗಳೂರು ಅಶೋಕನಗರ ಲಯನ್ಸ್‌ನ ಸದಸ್ಯರಾಗಿ ಸೇರ್ಪಡೆಗೊಂಡು, ಅಧ್ಯಕ್ಷರಾಗಿ, ವಲಯ ಅಧ್ಯಕ್ಷರಾಗಿ, ವಲಯಸಲಹೆಗಾರರಾಗಿ ಹಾಗೂ ವಿವಿಧ ರಾಜ್ಯಪಾಲರುಗಳ ಸಂಪುಟದಲ್ಲಿ ಹಲವು ಹುದ್ದೆಗಳನ್ನು ಸಮರ್ಥವಾಗಿ ನಿರ್ವಹಿಸಿ, 2011-12ರ ರಾಜ್ಯಪಾಲರಾದ ಕಿಶೋರ್ ರಾವ್‌ರವರ ಸಂಪುಟದಲ್ಲಿ ಪ್ರಾಂತೀಯ ಅಧ್ಯಕ್ಷರಾಗಿ ಉತ್ತಮ ಸೇವೆ ಸಲ್ಲಿಸಿದುದಕ್ಕಾಗಿ, 22-7-2012ರಂದು ಮಂಗಳೂರಿನ ಸೆಬೆಸ್ಟಿನ ಹಾಲಿನಲ್ಲಿ ನಡೆದ ಲಯನ್ಸ್ ಜಿಲ್ಲಾ ಅವಾರ್ಡ್‌ನೈಟ್‌ನಲ್ಲಿ ರಾಜ್ಯಪಾಲ ಕಿಶೋರ ರಾವ್ "Outstanding Region Chair Person" ಪ್ರಶಸ್ತಿ ನೀಡಿ ಗೌರವಿಸಿರುತ್ತಾರೆ. ಕನಕವಲ್ಲಿಯವರಿಗೂ ರೂರಲ್ ಡೆವಲಪ್‌ಮೆಂಟ್ ಜಿಲ್ಲಾಧ್ಯಕ್ಷರಾಗಿ ಸೇವೆ ಸಲ್ಲಿಸಿರುವುದಕ್ಕೆ Lioness Award, "Supreme Excellence Award" ನೀಡಿ ಗೌರವಿಸಿರುತ್ತಾರೆ.

**-ಕನಕವಲ್ಲಿ ಹರ್ಷಕುಮಾರ್**

# ಪಡುಬಿದ್ರಿಯಲ್ಲಿ 'ಸೋಣಡೊಂಜಿ ದಿನ' ಆಚರಣೆ



ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿ (ರಿ), ಇದರ ಮಹಿಳಾ ವೇದಿಕೆಯ ಸದಸ್ಯೆಯರಿಂದ ತಾ.26-08-2012ರಂದು ಸೋಣಡೊಂಜಿದಿನ ಎಂಬ ಕಾರ್ಯಕ್ರಮವು ಪಡುಬಿದ್ರಿಯ ಪಿ.ಬಿ ಭುಜಂಗರಾವ್ ಇವರ ನಿವಾಸ 'ಸಿದ್ಧಿ ವಿನಾಯಕ'ದಲ್ಲಿ ನಡೆಯಿತು. ಐದು ಜನ ಮುತ್ತೈದೆಯರು ದೀಪ ಬೆಳಗುವುದರ ಮೂಲಕ ಕಾರ್ಯಕ್ರಮವು ಆರಂಭವಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಂಡ್ಕೂರಿನ ನಿವೃತ್ತ ಶಿಕ್ಷಕಿ ಶ್ರೀಮತಿ ಕುಮುದಿನಿ ರಾಜಶೇಖರ್ ಬೆಳ್ಳೆ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿ, ಇದರ ಗೌರವಾಧ್ಯಕ್ಷರಾದ ಶ್ರೀಯುತ ಪಿ.ಬಿ. ವಾಸುದೇವರಾವ್ ಮತ್ತು ಅಧ್ಯಕ್ಷರಾದ ಶ್ರೀಯುತ ಎಂ.ಕೆ ಮೋಹನ್‌ರಾವ್ ಇವರು ವಹಿಸಿದ್ದರು. ಸಮಾಜ ಭಾಂಧವರಾದ ನಂದಿಕೂರಿನ ನಾಟಿವೈದ್ಯೆ ಶ್ರೀಮತಿ ರತ್ನಮ್ಮ ಇವರನ್ನು ಸನ್ಮಾನಿಸಲಾಯಿತು.

ಶ್ರೀಮತಿ ಲಲಿತಾಂಬ ಯೋಗಾನಂದ ಶಾಸ್ತ್ರಿ ಇವರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀಮತಿ ಸೀತಾದೇವಿ ಭಾಸ್ಕರ್ ಇವರು ಶ್ರಾವಣಮಾಸದ ಮಹತ್ವದ ಕುರಿತು ಪ್ರಸ್ತಾವನೆ ಮಾಡಿದರು. ಸನ್ಮಾನಿತರು ವೇದಿಕೆಯ ಕೆಲಸಗಳ ಬಗ್ಗೆ ಹರ್ಷ ವ್ಯಕ್ತಪಡಿಸಿದರು. ಅತಿಥಿಗಳು ನಮ್ಮ ಕಾರ್ಯಕ್ರಮವನ್ನು ಶ್ಲಾಘಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ರೀತಿ ಎಲ್ಲರೂ ಒಟ್ಟು ಸೇರಿ ಆಚರಿಸುವ ಕಾರ್ಯಕ್ರಮವು ಒಂದು ಉತ್ತಮ ಹಬ್ಬದಂತಿದೆ, ಸಮಾಜ ಬಾಂಧವರು ಎಲ್ಲರೊಡನೆ ಬೆರೆಯಲು ಇದು ಒಂದು ಸೇತುವೆಯಂತಿದೆ ಎಂದು ತಮ್ಮ ಸಂತಸ ವ್ಯಕ್ತಪಡಿಸಿದರು. ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಶರಾವತಿ ರವಿರಾಜ್ ಇವರು ಧನ್ಯವಾದ ಸಮರ್ಪಿಸಿದರು.

ಶ್ರಾವಣಮಾಸದ ಹಬ್ಬಗಳಲ್ಲಿ ತಯಾರಿಸುವ ವಿವಿಧ ಭಕ್ಷ್ಯಗಳಿಂದ ಭೋಜನಕೂಟವನ್ನು ಮಹಿಳಾವೇದಿಕೆಯ ಸದಸ್ಯೆಯರು ಏರ್ಪಡಿಸಿದ್ದರು. ಸೇಮಿಗೆ, ಪತ್ರೊಡೆ, ಅರಸಿನ ಎಲೆ ಕಡುಬು, ಹಲಸಿನ ಹಣ್ಣಿನ ಕಡುಬು, ಹುರುಳಿಸಾರು, ಕೆಸುವಿನ ಎಲೆಯ ಚಟ್ನಿ,ಚಕ್ಕುಲಿ, ಬಿಂಡೆ, ಪಾಯಸ ಮೊದಲಾದ 25ತರದ ತಿಂಡಿಗಳಿದ್ದವು. ಧಾರಾಕಾರವಾಗಿ ಸುರಿದ ಮಳೆಯ ನಡುವೆ ಕೂಡಾ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

**-ಸೀತಾದೇವಿ ಬಾಸ್ಕರ್ ರಾವ್,**
**ಪಡುಬಿದ್ರಿ**

# ಅಪ್ರತಿಮ ಪ್ರತಿಭಾನ್ವಿತೆ ಕುಮಾರಿ ಅಕ್ಷತಾ



ಅಕ್ಷತಾ ಸಿ., ಈಕೆ ಕಾರ್ಕಳದ ಶ್ರೀ ಸಿ. ರಮೇಶ ರಾವ್ ಹಾಗೂ ಕೆ. ಆರ್.ಕೃಷ್ಣವೇಣಿ ರಾವ್ ಇವರ ಸುಪುತ್ರಿ. ಕಾರ್ಕಳದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಕಾಬೆಟ್ಟು, ಇಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು ಶ್ರೀಮದ್ ಭುವನೇಂದ್ರ ಆಂಗ್ಲಮಾಧ್ಯಮ ಪ್ರೌಢಶಾಲೆಯಲ್ಲಿ ಪ್ರೌಢ ಶಿಕ್ಷಣ, ಶ್ರೀ ಭುವನೇಂದ್ರ ಕಾಲೇಜಿನಲ್ಲಿ ಪದವಿಪೂರ್ವ ಹಾಗೂ ಪದವಿ ಶಿಕ್ಷಣವನ್ನು ಪೂರೈಸಿ, ಮೂಡುಬಿದಿರೆಯ ಆಳ್ವಾಸ್ ಕಾಲೇಜಿನಲ್ಲಿ ಸ್ನಾತಕೋತ್ತರ ಪದವಿ ಪಡೆದಿರುತ್ತಾರೆ.

ಭರತನಾಟ್ಯದಲ್ಲಿ ಆಸಕ್ತಿ ಹೊಂದಿರುವ ಇವರು, ಮಂಗಳೂರಿನ 'ಸನಾತನ ನಾಟ್ಯಾಲಯ'ದ ನೃತ್ಯಗುರುಗಳಾದ ವಿದೂಷಿ ಶ್ರೀಮತಿ ಶಾರದಾಮಣಿಶೇಖರ್, ವಿದೂಷಿ ಶ್ರೀಮತಿ ಶ್ರೀಲತಾ ನಾಗರಾಜ್ ಹಾಗೂ ಶಾಂತಲ ಪ್ರಶಸ್ತಿ ವಿಜೇತ, ಕರ್ನಾಟಕ ಕಲಾತಿಲಕ ನಾಟ್ಯಾಚಾರ್ಯ ವಿದ್ವಾನ್ ಶ್ರೀ ಮುರಲೀಧರ್ ರಾವ್ ಇವರುಗಳಲ್ಲಿ ಶಿಷ್ಯತ್ವವನ್ನು ಹೊಂದಿ ಭರತನಾಟ್ಯದ ವಿದ್ವತ್ ಪದವಿಯ ಸಿದ್ಧತೆಯಲ್ಲಿರುತ್ತಾರೆ.

ಸನಾತನ ನೃತ್ಯೋತ್ಸವ, ಕರಾವಳಿ ಉತ್ಸವ, ಮಹಾಮಸ್ತಕಾಭಿಷೇಕ, ಕನ್ನಡ ಸಾಹಿತ್ಯ ಸಮ್ಮೇಳನ, ಆಳ್ವಾಸ್ ನುಡಿಸಿರಿ, ಸ್ವಾತಂತ್ರ್ಯೋತ್ಸವ, ನವರಾತ್ರಿ ಉತ್ಸವ, ಗಣೇಶೋತ್ಸವ, ಭರತಮಣಿ ನ್ಯಾಶನಲ್ ಮ್ಯೂಜಿಕ್ ಆ್ಯಂಡ್ ಡಾನ್ಸ್ ಫೆಸ್ಟಿವಲ್ 2009, ಶ್ರೀ ನಾರಾಯಣಿ ಕಲಾಪೀಠಂ ಗೋಲ್ಡನ್ ಟೆಂಪಲ್ ವೆಲ್ಲೂರು, ಗಾನಮುಕುಂದಪ್ರಿಯಾ ಚೆನ್ನೈ, ಕೋಲಾರ, ಬಿಜಾಪುರ ಹಾಗೂ ರಾಜ್ಯದ ಇನ್ನೂ ಅನೇಕ ಪ್ರಮುಖ ವೇದಿಕೆಗಳಲ್ಲಿ, ತಮ್ಮ ಗುರುಗಳ ನೃತ್ಯ ನಿರ್ದೇಶನದಲ್ಲಿ ಸನಾತನ ನಾಟ್ಯತಂಡದ ಓರ್ವ ಸದಸ್ಯೆಯಾಗಿ ನೃತ್ಯ ಪ್ರದರ್ಶನವನ್ನು ನೀಡಿರುತ್ತಾರೆ. ಅಲ್ಲದೆ ಭರತನೃತ್ಯ ಸಭಾ, ಶ್ರೀ ಭುವನೇಂದ್ರ ಕಾಲೇಜಿನ ಶ್ರೀ ರಾಮಕೃಷ್ಣ ವೇದಿಕೆ, ವಿವೇಕ ಜಾಗ್ರತ ಬಳಗ ಬಂಟ್ವಾಳ, ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ ಹಾಗೂ ಇನ್ನಿತರ ವೇದಿಕೆಗಳಲ್ಲಿ ತಮ್ಮ ಏಕವ್ಯಕ್ತಿ ನೃತ್ಯ ಪ್ರದರ್ಶನವನ್ನು ನೀಡಿರುತ್ತಾರೆ.

ಪ್ರೊ| ಉದ್ಯಾವರ ಮಾಧವ ಆಚಾರ್ಯ ಇವರು ನಿರ್ದೇಶಿಸಿದ, ಕವಿ ಪು.ತಿ.ನ., ವಿರಚಿತ 'ಕುಚೇಲ-ಕೃಷ್ಣ' ಎಂಬ ಗೀತನೃತ್ಯರೂಪಕದಲ್ಲಿ 'ಕುಚೇಲನ' ಪಾತ್ರವನ್ನು ನಿರ್ವಹಿಸಿರುತ್ತಾರೆ. ಈ ನೃತ್ಯರೂಪಕವು, ಶ್ರೀ ಭುವನೇಂದ್ರ ಕಾಲೇಜಿನ ಸ್ವರ್ಣ ಮಹೋತ್ಸವ, ಸಾಹಿತ್ಯ ಸಂಘ ಕಾರ್ಕಳ, ಧರ್ಮಸ್ಥಳ, ಶ್ರೀ ರಾಮಕೃಷ್ಣಾಶ್ರಮ ಮಂಗಳೂರು, ರೆಂಜಾಳ, ಉಡುಪಿ ಜಿಲ್ಲಾ ಉತ್ಸವ, ರಾಜ್ಯಮಟ್ಟದ ಕೃಷಿ ಉತ್ಸವ ಬಜಗೋಳಿ, ಉಡುಪಿಯ ರಾಜಾಂಗಣದಂತಹ ಪ್ರಮುಖ ವೇದಿಕೆಗಳಲ್ಲಿ ಪ್ರದರ್ಶನಗೊಂಡು ಜನಮೆಚ್ಚುಗೆ ಪಡೆದಿದೆ. ಇತ್ತೀಚೆಗೆ ಮಂಗಳೂರಿನ ಪುರಭವನದಲ್ಲಿ ನಡೆದ ಶ್ರೀ ಗಣೇಶ ಕಾರ್ಣಿಕ್ ಅಭಿನಂದನ ಕಾರ್ಯಕ್ರಮದಲ್ಲಿ ನೀಡಿದ ಭರತನಾಟ್ಯ ಪ್ರದರ್ಶನ ಜಿಲ್ಲಾದ್ಯಂತ ಪ್ರಶಂಸೆಗೆ ಪಾತ್ರವಾಗಿದೆ.

ಕರಾವಳಿಯ ವಿಶಿಷ್ಟ ನೃತ್ಯ ಪ್ರಕಾರವಾದ ಯಕ್ಷಗಾನದಲ್ಲಿ ಆಸಕ್ತಿ ಹೊಂದಿರುವ ಇವರು, ಶ್ರೀ ಭುವನೇಂದ್ರ ಕಾಲೇಜಿನ ಇಂದ್ರಪ್ರಸ್ಥ ಯಕ್ಷಗಾನ ಕೇಂದ್ರದ ನಾಟ್ಯಗುರುಗಳಾದ ಶ್ರೀ ಮಹಾವೀರ ಪಾಂಡಿ ಕಾಂತಾವರ ಇವರ ಬಳಿ ತೆಂಕುತಿಟ್ಟಿನ ನಾಟ್ಯಶೈಲಿಯನ್ನು ಅಭ್ಯಸಿಸಿರುತ್ತಾರೆ. ಇವರ 'ಕಂಸವಧೆ'ಯ ಕೃಷ್ಣನ ಪಾತ್ರಾಭಿನಯಕ್ಕೆ ಶ್ರೀ ಭುವನೇಂದ್ರ ಕಾಲೇಜಿನಿಂದ ವರ್ಷಂಪ್ರತಿ ಕೊಡಲ್ಪಡುವ ಶ್ರೀ ಜಯಂತ ಶೆಟ್ಟಿ ದತ್ತಿನಿಧಿ ಪ್ರಶಸ್ತಿ ಸಂದಿದೆ. ಇದಲ್ಲದೆ ಚಿತ್ರಕಲೆ, ಕರಕುಶಲ ವಸ್ತು ತಯಾರಿ, ಕಸೂತಿ ಹವ್ಯಾಸಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಇವರ ಭವಿಷ್ಯ ಉಜ್ವಲವಾಗಲೆಂದು ಹಾರೈಸೋಣ

**- ಶ್ರೀಮತಿ ಸಾವಿತ್ರಿ ಮನೋಹರ**
**ಶಂಕರಪ್ರತಿಷ್ಠಾನ, ಕಾರ್ಕಳ**

# ಶ್ರೀಶಾರದಾ ಮಂಟಪದಲ್ಲಿ ಋಗುಪಾಕರ್ಮ ಆಚರಣೆ

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ಇವರ ಆಶ್ರಯದಲ್ಲಿ ತಾ.17-09-2012ರಂದು ಸೌರ ಋಗುಪಾಕರ್ಮವು ನೆರವೇರಿತು. ಅಂದು ಬೆಳಿಗ್ಗೆ 9-30ಕ್ಕೆ ಪ್ರಾರಂಭವಾದ ಕಾರ್ಯಕ್ರಮದ ನೇತೃತ್ವವನ್ನು ಶ್ರೀಯುತ ನಾಗರಾಜ ಭಟ್ ಹಾಗೂ ಶ್ರೀ ರವಿ ಉಪಾಧ್ಯಾಯ ಪಾವಂಜೆ ಇವರು ವಹಿಸಿದ್ದರು.

ಈ ಯಜ್ಞೋಪವೀತ ಧಾರಣಾ ಕಾರ್ಯಕ್ರಮದಲ್ಲಿ ನಮ್ಮ ಸಮಾಜದ ಸುಮಾರು 75 ಮಂದಿ ಪಾಲ್ಗೊಂಡಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಕೊನೆಯಲ್ಲಿ ಎಲ್ಲರೂ ಪ್ರಸಾದ ಭೋಜನ ಸ್ವೀಕರಿಸಿದರು.

**-ಎಚ್.ಎನ್.ಶ್ಯಾನುಭಾಗ್**

# 'ಭಾರತೀಯ ಕವಿತಾ ಬಿಂಬ'ದಲ್ಲಿ ಅವನೀಂದ್ರನಾಥ ರಾವ್

ದೆಹಲಿ ಸರಕಾರದ ದೆಹಲಿ ಉತ್ಸವದ ಅಂಗವಾಗಿ ಈಚೆಗೆ ಹಿಂದಿ ಅಕಾಡೆಮಿಯು ಆಯೋಜಿಸಿದ ಭಾರತೀಯ ಕವಿತಾ ಬಿಂಬ ರಾಷ್ಟ್ರೀಯ ಕವಿ ಸಮ್ಮೇಳನದಲ್ಲಿ ದೆಹಲಿಯ ಸಾಹಿತಿ ವೈ. ಅವನೀಂದ್ರನಾಥ್ ರಾವ್ ಅವರು ಭಾಗವಹಿಸಿ ಸ್ವರಚಿತ ಕವನಗಳನ್ನು ವಾಚಿಸಿದರು. ದೇಶದ ವಿವಿಧ ಭಾಷೆಗಳ 35ಕ್ಕೂ ಹೆಚ್ಚು ಆಹ್ವಾನಿತ ಕವಿಗಳು ತಮ್ಮ ಕವನಗಳನ್ನು ವಾಚಿಸಿದರು.

ಕನ್ನಡವನ್ನು ಪ್ರತಿನಿಧಿಸಿದ ಇನ್ನೋರ್ವ ಕವಯತ್ರಿ ಶ್ರೀಮತಿ ಪ್ರತಿಭಾ ನಂದಕುಮಾರ್. ಭಾರತೀಯ ವಿದ್ಯಾಭವನದಲ್ಲಿ ನಡೆದ ಎರಡು ದಿನಗಳ ಈ ಸಮ್ಮೇಳನದ ಹಿಂದೆ ಮುಖ್ಯಮಂತ್ರಿ ಶೀಲಾ ದೀಕ್ಷಿತ್ ವಿಶೇಷ ಆಸಕ್ತಿ ವಹಿಸಿದ್ದರು.

**-ವೈ. ಅವನೀಂದ್ರನಾಥ್ ರಾವ್**

# ವೇದಗಣಿತದ ಪರಿಚಯ

-ಸಿ.ಎಸ್.ರಾವ್
ವಿಶ್ರಾಂತ ಡಿ.ಜಿ.ಎಮ್., ಕಾರ್ಪೋರೇಶನ್ ಬ್ಯಾಂಕ್



(ಹಿಂದಿನ ಸಂಚಿಕೆಯಿಂದ...)

ಉದಾಹರಣೆ 10 :

ಈ ತನಕ ನಾವು Base figure '10', '100', '1000'ದ ಒಳಗಿನ ಸಂಖ್ಯೆ ನೋಡಿದೆವು. ಈಗ Base figureಗಿಂತ ಜಾಸ್ತಿ ಇದ್ದ ಸಂಖ್ಯೆ ಯಿಂದ ಹೇಗೆ ಗುಣಿಸುವುದೆಂದು ನೋಡುವ.

**1.** **ಪ್ರಶ್ನೆ** : 1014 x 1011 ಇದನ್ನು 1000ಕ್ಕೆ Base ಮಾಡಿದರೆ (ಹಿಂದೆ Baseಗಿಂತ ಕೆಳಗೆ ಇದ್ದ ಅಂಕೆಯನ್ನು ಗುಣಿಸಿ ಉತ್ತರವನ್ನು ಕಳೆಯುತ್ತಿದ್ದೆವು ಈಗ ಅದನ್ನು ಕೂಡಿಸಬೇಕು
- 1014 x 1011=14/1014 x 11/1011
(14 x 11=154) ಆಮೇಲೆ (1014+11 ಅಥವಾ 1011+14=1025)
ಉತ್ತರ : 1025154

**2.** **ಪ್ರಶ್ನೆ** : 102 x 111= 2/102 x 11/111
(2 x 11=22)102+11 ಅಥವಾ 111+2(113) = ಉತ್ತರ : 11322

**3.** **ಪ್ರಶ್ನೆ** : 107 x 104=7/107 x 4/104
(7 x 4=28, 107+4 ಅಥವಾ 104+7(111)=11128

**4.** **ಪ್ರಶ್ನೆ** : 1014 x 1011=14/1014 x 11/1011 (14 x 11=154)
(1014+11 ಅಥವಾ 1011+14=1025) ಉತ್ತರ : 1025154

**5.** **ಪ್ರಶ್ನೆ** : 101 x 107=1/101 x 7/107 (7 x 1=7)
ಆದರೆ ಎರಡು ಸಂಖ್ಯೆಯ ಉತ್ತರ ಬರಬೇಕು ಅದಕ್ಕಾಗಿ ಅದನ್ನು 07 ಎರಡು ಬರೆಯಬೇಕು)
(101+7 ಅಥವಾ (107+1=108) ಉತ್ತರ :10807

ಉದಾಹರಣೆ 11 :

ಕೆಲವು ಅಂಕೆಗಳು 50ರ ಸಂಖ್ಯೆ ಹತ್ತಿರ ಇರುವಾಗ ಅದನ್ನು Base ಆಗಿ ತೆಗೆದು ಕೊಳ್ಳಬಹುದು. ಆಗ ಕೊನೆಗೆ (ಅಂದರೆ ಉತ್ತರದ ಮೊದಲು ಬರುವ ಅಂಕೆಗೆ 2 ರಿಂದ ಗುಣಿಸಿ ಬರೆಯಬಹುದು. ಈ ಉತ್ತರದ ಅಂಕೆ ವಿಷಮ ಸಂಖ್ಯೆ ಬಂದರೆ, 1/2 ಅಥವಾ 0.5ನ್ನು ಮೊದಲಿನ ಅಂಕೆಗೆ ಸೇರಿಸಬೇಕು. ಉತ್ತರದ ಕೊನೆಯ ಸಂಖ್ಯೆ 17 ಮತ್ತೆ ಮೇಲಿನ ಸಂಖ್ಯೆ 47 ಬಂದರೆ (47%2=23.5)ಇದನ್ನು 17ಕ್ಕೆ ಕೂಡಿಸುವಾಗ
23.5+17=2367 ಹೀಗೆ)

**1.** **ಪ್ರಶ್ನೆ** : 42 x 48
08/42 x 02/48 (Base 50) (8 x 2=16)
(42-2 ಅಥವಾ 48-8=40, 40/2=20) ಹಾಗಾಗಿ ಉತ್ತರ 2016

**2.** **ಪ್ರಶ್ನೆ** : 45 x 43 = 5/45 x 7/43 (Base 50)
(5 x 7=35) (45-7, 43-5=38, 38/2=19 ಹಾಗಾಗಿ ಉತ್ತರ 1935

**3.** **ಪ್ರಶ್ನೆ** : 42 x 49=8/42 x 1/49 (Base 50) (8 x 1=08)
(42-1, 49-8=41 41/2=20.5
20-5+08=2058

**3.** **ಪ್ರಶ್ನೆ** :42 x 46=8/42 x 4/46
(8 x 4=32) 42-4, 46-8=38 (38/2=19) ಉತ್ತರ-1932

ಉದಾಹರಣೆ 12 :

ಈಗ ಒಂದು ಸಂಖ್ಯೆ 100ರ ಒಳಗೆ ಮತ್ತು ಇನ್ನೊಂದು ಸಂಖ್ಯೆ 100ರ ಮೇಲೆ ಇದ್ದರೆ ಹೇಗೆ ನೋಡಬಹುದು.

**1.** **ಪ್ರಶ್ನೆ** : 96 x 105=-04/96 x +05/105 (4 x 5=20) (96+5 ಅಥವಾ 105-4=101)
(10100-20=10080) ಉತ್ತರ : 10080
ಅಂದರೆ ಒಂದು ಬದಿ (-) ಇನ್ನೊಂದು ಬದಿ +ಇದ್ದುದರಿಂದ 100 ರಿಂದ 20ನ್ನು ಕಳೆದು ಬರೆಯಬೇಕು (100-20=80)10100-20=10080

**2.** **ಪ್ರಶ್ನೆ** : 960 x 1020=-040/960 x +020/1020
(-40 x 20=-800) (960+20=980 ಅಥವಾ 1020-40=980)
980000-800=979200 ಉತ್ತರ : 979200

**3.** **ಪ್ರಶ್ನೆ** : 93 x 120=-07/93 x +20/120
(-07+20=-140) (93+20=113 ಅಥವಾ 120-7=113)
11300-140=11160

**4.** **ಪ್ರಶ್ನೆ** : 89 x 125= -11/89 x +25/125
(-11+25=-275) (89+25=114, 125-11=114)
11400-275=11125, ಉತ್ತರ : 11125

ಉದಾಹರಣೆ 13 :

ಇದೆ ರೀತಿ 50 Base ಆದರೆ ಹೇಗೆ? 50 Base ಆದರೆ ಮೇಲೆ ಹೇಳಿದ ಹಾಗೆ ಮಾಡಿ ಆಮೇಲೆ 2 ರಿಂದ ಭಾಗಿಸಿ, ಒಂದು ಭಾಗಲಬ್ದದಲ್ಲಿ ಮೊದಲ ಮೊತ್ತವನ್ನು ಕಳೆಯಬೇಕು.

**1.** **ಪ್ರಶ್ನೆ** : 48 x 51= -02/48 x +01/51
(-02 x 01=-02) (48+1=49, 51-2=49) 49/2=24.5
24.50-02=2448

**2.** **ಪ್ರಶ್ನೆ** : 49 x 57= -01/49 x +07/57
(-01 x +07=07) (49+07=56, 57-01=56) 56/2=28
2800-07=2793

**3.** **ಪ್ರಶ್ನೆ** : 46 x 57=-04/46 x +07/57
(-04 x +07=-28) (46+07=53, 57-04=53) 53/2=26.5
26.50-28=2622


**4.** **ಪ್ರಶ್ನೆ** : 48 x 54=-02/48 x +04/54
(-02 x +04=-08) (48+04=52, 54-02=52) 52/2=26
2600-08=2592

**ತಿಂಗಳ ಪ್ರಶ್ನೆ: 40 ಕೆ.ಜಿಯ ಒಂದು ಕಲ್ಲು ಕೆಳಗೆ ಬಿದ್ದು 4 ತುಂಡು ಆಯಿತು. 4 ತುಂಡನ್ನು ಉಪಯೋಗಿಸಿ 1 ಕೆ.ಜಿ.ಯಿಂದ 40 ಕೆ.ಜಿ.ಯವರೆಗೆ ತೂಕವನ್ನು ಮಾಡಲು ಉಪಯೋಗಿಸುತ್ತಾರೆ. ಹಾಗಾದರೆ 4 ಕಲ್ಲಿನ ತುಂಡಿನ ಭಾರವೆಷ್ಟು? ಉತ್ತರ ನಿರೀಕ್ಷಿಸಿ.**

(ಮುಂದುವರಿಯುವುದು)

# ಕನ್ನಡ ಕವಿಕಾವ್ಯ ಪರಿಚಯ-೪ : ಭಕ್ತ ಕವಿ ಪುರಂದರ ದಾಸರು

- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.



'ದಾಸರೆಂದರೆ ಪುರಂದರ ದಾಸರಯ್ಯ' ಎಂಬ ಮಾತಿದೆ. ಸಾಹಿತ್ಯ ಪ್ರಕಾರಗಳಲ್ಲಿ ಗದ್ಯ, ಪದ್ಯ, ಚಂಪೂಗಳಿರುವಂತೆ ವಚನ ಹಾಗೂ ದಾಸ ಸಾಹಿತ್ಯ ಪ್ರಕಾರಗಳೂ ಇವೆ. ಪ್ರಸ್ತುತ ಲೇಖನದಲ್ಲಿ ದಾಸಸಾಹಿತ್ಯದ ಕುರಿತು ಚರ್ಚಿಸಲಾಗುತ್ತಿದೆ. ಕ್ರಿ.ಶ. 12ನೇ ಶತಮಾನ ದಿಂದ 19ನೇ ಶತಮಾನದವರೆಗೆ ಅನೇಕ ಮಂದಿ ದಾಸರು ಕೀರ್ತನೆಗಳನ್ನು ರಚಿಸಿದ್ದಾರೆ. ವ್ಯಾಸ ರಾಯರು ಮುಖ್ಯವಾಗಿರುವ ದಾಸಕೂಟವು ಮಹತ್ವದ ಸ್ಥಾನವನ್ನು ಹೊಂದಿತ್ತು. ನರಹರಿ ತೀರ್ಥರಿಂದ ಆರಂಭವಾಗಿ ಪುರಂದರ-ಕನಕದಾಸರಿಂದ ಬೆಳೆದು, ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರೇ ಮೊದಲಾದವರಿಂದ ದಾಸಸಾಹಿತ್ಯವು ಅಪಾರ ಸೀಮೆಯನ್ನು ಹೊಂದಿತು. ಭಕ್ತಿ, ಜ್ಞಾನ, ವೈರಾಗ್ಯ, ಮುಮುಕ್ಷು ಭಾವಗಳನ್ನು ಜನರಿಗೆ ತಿಳಿಯಪಡಿಸಿದ ಪ್ರಮುಖ ಸಾಹಿತ್ಯಪ್ರಕಾರವೇ ದಾಸಸಾಹಿತ್ಯವಾಗಿದ್ದು ಇದು ಮಾನವ ಜನ್ಮದ ಸಫಲತೆಯನ್ನು ಕೊಂಡಾಡಿರುವುದು. ಪುರಂದರದಾಸರು ಇಂತಹ ದಾಸಶ್ರೇಷ್ಠರಲ್ಲಿ ಒಬ್ಬರಾಗಿದ್ದು, ತನ್ನ ಸಕಲ ಪರಿವಾರದೊಂದಿಗೆ ಹರಿದಾಸರಾಗಿ ಮೆರೆದವರಾಗಿದ್ದರು. ವರದ ಪುರಂದರ, ಗುರು ಪುರಂದರ, ಮಧ್ವಪತಿ ಪುರಂದರ, ಅಭಿನವ ಪುರಂದರ ವಿಠಲ ಎಂಬ ಹೆಸರಿನಿಂದ ಪುರಂದರದಾಸರ ಮಕ್ಕಳು ಗೀತೆಗಳನ್ನು ರಚಿಸಿದ್ದಾರೆ. 'ತಂದೆ ಪುರಂದರ ವಿಠಲ' ಎಂಬ ಅಂಕಿತವನ್ನು ಅವರ ಪತ್ನಿಯು ಬಳಸಿದ್ದಳು. 'ಒಡೆಯ ಪುರಂದರ ವಿಠಲ' ಎಂಬ ಅಂಕಿತವನ್ನು ಅವರ ಸೇವಕನು ಉಪಯೋಗಿಸಿದ್ದನು. ಹೀಗೆ ಪುರಂದರ ದಾಸರ ಇಡಿಯ ಬಳಗವೇ ಪದ್ಯ ರಚನೆ ಮಾಡಿರುವುದು.

ದೇವತೆಗಳಲ್ಲಿ ಸಂಗೀತ ವಿಶಾರದರಾದ ನಾರದರ ಅವತಾರವೇ ಪುರಂದರದಾಸರೆಂದು ಪ್ರತೀತಿ. ಕ್ರಿ.ಶ.1480 ಇವರ ಜೀವಿತದ ಕಾಲವು. ಪಂಡರಾಪುರದ ಬಳಿಯಲ್ಲಿ ಬ್ರಾಹ್ಮಣ ಕುಟುಂಬದಲ್ಲಿ ಚೀನಿವಾಲ ವೃತ್ತಿಯ ವರದಪ್ಪ ನಾಯಕ ಎಂಬವರ ಮಗನಾಗಿ ಜನಿಸಿದ ಇವರ ಮೊದಲಿನ ಹೆಸರು ಶ್ರೀನಿವಾಸ ನಾಯಕನೆಂದು. ಜನ್ಮದಿಂದಲೇ ಆಗರ್ಭ ಶ್ರೀಮಂತರಾಗಿದ್ದ ಇವರಿಗೆ ನವಕೋಟಿ ನಾರಾಯಣ ಎಂಬ ಬಿರುದಿತ್ತು. ಅಪಾರ ಸಂಪತ್ತನ್ನು ಕೂಡಿ ಹಾಕಿದ್ದ ಇವರು ಬಿಡಿಕಾಸನ್ನೂ ದಾನಮಾಡುತ್ತಿರಲಿಲ್ಲ. ದೇವರೇ ಬಡ ಬ್ರಾಹ್ಮಣನ ವೇಷದಲ್ಲಿ ಒಂದು ದಾನ ಬೇಡಿದರೂ ಇವರು ಏನನ್ನೂ ಕೊಡದೆ ಬರಿಗೈಯಲ್ಲಿ ಕಳುಹಿಸಿದರು. ಆಗ ಆ ಬ್ರಾಹ್ಮಣ ನಾಯಕರ ಹೆಂಡತಿ ಸರಸ್ವತಿಯಲ್ಲಿ ಒಂದು ದಾನ ಬೇಡಿದನು. ಸರಸ್ವತಿಯು ಕರುಣೆಯಿಂದ ತನ್ನ ಮೂಗುತಿಯನ್ನು ದಾನವಾಗಿತ್ತಳು. ಮನೆಗೆ ಬಂದ ನಾಯಕರು ಹೆಂಡತಿಯ ಮೂಗು ಬರಿದಾದುದನ್ನು ಕಂಡು ಮೂಗುತಿಯೆಲ್ಲೆಂದು ಕೇಳಿದರು. ಕಳಚಿ ಪೆಟ್ಟಿಗೆಯಲ್ಲಿಟ್ಟಿದ್ದೇನೆಂದು ಸರಸ್ವತಿಯು ಸುಳ್ಳು ಹೇಳಿದಳು. ಈ ಮಧ್ಯೆ ಬ್ರಾಹ್ಮಣನು ಮೂಗುತಿಯನ್ನು ಮಾರಲು ನಾಯಕರ ಅಂಗಡಿಗೇ ಬಂದಿದ್ದ. ನಾಯಕರು ಅದನ್ನು ಅಂಗಡಿಯ ತಿಜೋರಿಯಲ್ಲಿ ಭದ್ರವಾಗಿಟ್ಟು, ಬೀಗ ಹಾಕಿ ಮನೆಗೆ ಒಂದು ಪತ್ನಿಯನ್ನು ತರಾಟೆಗೆ ತೆಗೆದುಕೊಂಡಿದ್ದರು. ಮನೆಯ ಪೆಟ್ಟಿಗೆಯನ್ನು ತೆರೆದು ನೋಡಲಾಗಿ ಮೂಗುತಿ ಅಲ್ಲಿ ಸಿಕ್ಕಿತು. ಆಗ ನಾಯಕರು ಬ್ರಾಹ್ಮಣನಾಗಿ ಬಂದಿದ್ದವನು ಮತ್ತಾರೂ ಆಗಿರದೆ ತನ್ನನ್ನು ಪರೀಕ್ಷಿಸಲೆಂದು ಬಂದ ಪರಮಾತ್ಮನೆಂದೇ ತಿಳಿದರು. ತತ್‌ಕ್ಷಣ ಜ್ಞಾನೋದಯವಾಗಿ ತನ್ನ ಅಪಾರ ಸಂಪತ್ತೆಲ್ಲವನ್ನೂ ಬಡಬಗ್ಗರಿಗೆ ದಾನಮಾಡಿ ತಂಬೂರಿಯನ್ನು ಹಿಡಿದು, ದಾಸರಾಗಿ 'ಆದದ್ದೆಲ್ಲಾ ಒಳಿತೇ ಆಯಿತು' ಎಂದು ಹಾಡುತ್ತಾ ವಿಜಯನಗರದ ವ್ಯಾಸರಾಯರ ಶಿಷ್ಯತ್ವವನ್ನು ಸ್ವೀಕರಿಸಿ, ಪುರಂದರ ದಾಸರಾದರು. ಕೀರ್ತನೆ, ಸುಳಾದಿ, ಉಗಾಭೋಗ ಇತ್ಯಾದಿಗಳ ಮೂಲಕ ಭಕ್ತಿಮಾರ್ಗವನ್ನು ಪ್ರಚುರ ಪಡಿಸಿದರು. ಸಾಹಿತ್ಯದೊಂದಿಗೆ ಸಂಗೀತವನ್ನು ಅಳವಡಿಸಿ ಕೊಂಡು ಬೆಳೆಸಿ, ಉಳಿಸಿಕೊಂಡಿರುವುದು ಪುರಂದರದಾಸರ ಕೀರ್ತನೆಗಳ ವೈಶಿಷ್ಟ್ಯ. ಮನೆಮನೆಗಳಿಗೆ ಹೋಗಿ ಹಾಡುತ್ತಾ, ಭಕ್ತಿಪಂಥವನ್ನು ಉಪದೇಶಿಸಿದ ಹರಿದಾಸರು ಇವರು. ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಹಾಡುತ್ತಾ, ಭಕ್ತರೆದುರಿಗೆ ಹರಿದಾಸರಾಗಿ ಕುಣಿದರು.


(ಮುಂದುವರಿಯುವುದು)

## ಶ್ರೀ ಕ್ಷೇತ್ರ ಪಾವಂಜೆಯಲ್ಲಿ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿಗೆ ಉದಯಾಸ್ತಮಾನ ಪರ್ಯಂತ ರುದ್ರಾಭಿಷೇಕ

ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿಗೆ ಕಳೆದ ಏಳು ವರ್ಷಗಳಲ್ಲಿ (ಶ್ರಾವಣ ಮಾಸದ ಒಂದು ಭಾನುವಾರ) ಅನೂಚಾನವಾಗಿ ನಡೆದುಕೊಂಡು ಬಂದಂತೆ, ಈ ವರ್ಷವೂ ತಾ.05-08-2012 ರಂದು ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ನಿರಂತರ ರುದ್ರ ಪಾರಾಯಣ ಹಾಗೂ ಅಭಿಷೇಕವು ನೆರವೇರಿತು. ಅನೇಕ ಭಕ್ತಾದಿಗಳು ಸೇವಾದಾರರಾದರೆ, ದೇವಳದ ಅರ್ಚಕ ವೃಂದ, ಪಾಠಶಾಲೆಯ ವಿದ್ಯಾರ್ಥಿಗಳು ಮತ್ತು ಆಸಕ್ತ ಶ್ರದ್ಧಾಳುಗಳು ರುದ್ರಪಾರಾಯಣ ಹಾಗೂ ಅಭಿಷೇಕದಲ್ಲಿ ಪಾಲ್ಗೊಂಡು ಸಹಕರಿಸಿದರು. ಶ್ರೀ ದೇವರ ಕಾರಣೀಕವೋ ಎಂಬಂತೆ ಈ ವರ್ಷ ಬರಗಾಲದ ಚಿಂತೆಯಲ್ಲಿದ್ದ ರಾಜ್ಯಕ್ಕೆ ಅದೇ ದಿನ ಮಳೆ ಪ್ರಾರಂಭಗೊಂಡು ಒಂದು ವಾರದವರೆಗೆ ಸುರಿದು ಬಹುತೇಕ ಜಲಾಶಯಗಳು ಭರ್ತಿಗೊಂಡಿತು. ಸಾಯಂಕಾಲ ಸೂರ್ಯಾಸ್ತಕ್ಕೆ ಮಂಗಳಾರತಿ, ರಂಗಪೂಜೆ ಹಾಗೂ ಮಹಾಮಂಗಳಾರತಿಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

-ಸ್ಕಂದಸ್ವಾಮಿ, ಮುಕ್ಕ

# "ಲೆಪ್ರೋಸ್ಕೋಪಿಕ್ ಸರ್ಜರಿ" ಪುಸ್ತಕ ಬಿಡುಗಡೆ



ಡಾ| ವೈ.ಸುದರ್ಶನ್ ರಾವ್‌ರವರು ಬರೆದ ಹಾಗೂ ಶ್ರೀಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.) ಇವರು ಪ್ರಕಟಿಸಿರುವ ಕಿರುಪುಸ್ತಕ "ಲೆಪ್ರೋಸ್ಕೋಪಿಕ್ ಸರ್ಜರಿ" ಇದರ ಬಿಡುಗಡೆ ಸಮಾರಂಭವು ಎಲ್ಲೂರಿನ ಶಾಂತಿಭವನದಲ್ಲಿ ತಾ.08-10-2012ರಂದು ನಡೆಯಿತು. ಡಾ| ವೈ.ಸುದರ್ಶನ ರಾಯರ ತಾಯಿ ಶ್ರೀಮತಿ ಇಂದಿರಾಬಾಯಿಯವರು ಈ ಪುಸ್ತಕವನ್ನು ಬಿಡುಗಡೆಗೊಳಿಸಿ ಶುಭ ಹಾರೈಸಿದರು. ಟ್ರಸ್ಟಿಗಳಾದ ಶ್ರೀ ವೈ.ಭುವನೇಂದ್ರರಾಯರು ಸಭಿಕರನ್ನು ಸ್ವಾಗತಿಸಿ ಲೆಪ್ರೋಸ್ಕೋಪಿ ವಿಧಾನದಲ್ಲಿ ಶಸ್ತ್ರಚಿಕಿತ್ಸೆ ಮಾಡುವ ಬಗ್ಗೆ ಜನ ಸಾಮಾನ್ಯರಿಗೆ ಮಾಹಿತಿ ನೀಡುವ ಈ ಪುಸ್ತಕದ ಬಗ್ಗೆ ವಿವರ ನೀಡಿದರು. ಲೇಖಕರು ಉಡುಪಿಯ ಖ್ಯಾತ ಶಸ್ತ್ರಚಿಕಿತ್ಸಾ ತಜ್ಞರು. ಇದು ಅವರ ಎರಡನೆಯ ಪುಸ್ತಕ. ಶ್ರೀಯುತರ ವೈದ್ಯಕೀಯ ಲೇಖನಗಳು ಶ್ರೀಶಾರದಾ ಪತ್ರಿಕೆಯಲ್ಲಿ ಪ್ರತಿ ತಿಂಗಳು ಪ್ರಕಟಗೊಳ್ಳುತ್ತಿವೆ. ಶ್ರೀ ಎಲ್ಲೂರು ಲಕ್ಷ್ಮೀನಾರಾಯಣರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.) ಇವರು ಸಮಾಜಕ್ಕೆ ಉಪಯೋಗವಾಗುವ ಪುಸ್ತಕಗಳನ್ನು ಮೊದಲಿನಿಂದಲೂ ಪ್ರಕಟಿಸುತ್ತಿದ್ದಾರೆ ಹಾಗೂ ಇದು ಅವರ ಐದನೇ ಪ್ರಕಟಣೆ.

- ವಿದ್ಯಾ ಎಸ್.ರಾವ್

# ಕರಂದಾಡಿಯಲ್ಲಿ ಗಣೇಶ ಚೌತಿ ಆಚರಣೆ



ಕರಂದಾಡಿ ಕೆ. ವಾಸುದೇವ ರಾವ್ ಇವರ ಮನೆಯಲ್ಲಿ ಅವರ ಮಗ ಪದ್ಮನಾಭ ರಾವ್ ಇವರು ಸ್ವತ: ತಯಾರಿಸಿದ ಗಣೇಶ ಮೂರ್ತಿಯು ಗಣೇಶ ಚೌತಿಯಂದು ಅವರ ಕರಂದಾಡಿಯ ಸ್ವಗೃಹದಲ್ಲಿ ಪೂಜಿಸಲ್ಪಟ್ಟಿತು.

-ಜಗದೀಶ ರಾವ್

# ಶ್ರೀಎಲ್ಲೂರುಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚ್ಯಾರಿಟೇಬಲ್ ಟ್ರಸ್ಟ್ (ರಿ)

76, ಬಡಗಬೆಟ್ಟು ಕುಕ್ಕಿಕಟ್ಟೆ, ಉಡುಪಿ-576101.

## ವಿದ್ಯಾರ್ಥಿ ವೇತನಕ್ಕೆ ಅರ್ಜಿ

ಇತ್ತೀಚೆಗೆ ದೈವಾಧೀನರಾದ ಬೆಂಗಳೂರಿನ ಶ್ರೀಸಾತ್ವಿ ಶಾಸ್ತ್ರಿಯವರ ಸ್ಮರಣಾರ್ಥ ಅವರ ಮಾತಾಪಿತರಾದ ಶ್ರೀದಿನೇಶ ಶಾಸ್ತ್ರಿ ಹಾಗೂ ಶ್ರೀಮತಿ ಉಷಾ ಶಾಸ್ತ್ರಿಯವರು ಆರ್ಥಿಕವಾಗಿ ಹಿಂದುಳಿದ ಹಾಗೂ ಪ್ರತಿಭಾವಂತ, ಹತ್ತನೆಯ ತರಗತಿಯ ಹಾಗೂ ಪದವಿಪೂರ್ವ ವಿದ್ಯಾರ್ಥಿಗಳಿಗಾಗಿ, ವಿದ್ಯಾರ್ಥಿವೇತನ ನೀಡಲು ಉದ್ದೇಶಿಸಿರುತ್ತಾರೆ. ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿ ಇದರ ಸದುಪಯೋಗ ಪಡೆದುಕೊಳ್ಳಲು ಕೋರುತ್ತಿದ್ದೇವೆ.

ಹಾಗೆಯೇ ನಮ್ಮ ಟ್ರಸ್ಟ್‌ನ ವತಿಯಿಂದ ಪ್ರತಿವರ್ಷವೂ ಕೊಡಲಾಗುವ ದಿ|ಡಾ|ವೈ.ಚಂದ್ರಶೇಖರರಾವ್ ಸ್ಮಾರಕ ವಿದ್ಯಾರ್ಥಿವೇತನಕ್ಕೆ ವೈದ್ಯಕೀಯ ಹಾಗೂ ತಾಂತ್ರಿಕ ಶಿಕ್ಷಣ ಪಡೆಯುತ್ತಿರುವ ಆರ್ಥಿಕವಾಗಿ ಹಿಂದುಳಿದ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಂದಲೂ ಅರ್ಜಿಗಳನ್ನು ಆಹ್ವಾನಿಸುತ್ತಿದ್ದೇವೆ.

ಕೈಬರಹದ ಅರ್ಜಿಯಲ್ಲಿ ಹೆತ್ತವರ ಹೆಸರು, ವಿಳಾಸ, ಉದ್ಯೋಗ, ವಿಳಾಸ ಹಾಗೂ ದೂರವಾಣಿ ಸಂಖ್ಯೆ ನಮೂದಿಸಿರಬೇಕು. ಹಾಗೆಯೇ ಅದರೊಂದಿಗೆ ಆದಾಯ ಪ್ರಮಾಣಪತ್ರ, ಹಿಂದಿನ ವರ್ಷದ ಅಂಕಪಟ್ಟಿ, ವ್ಯಾಸಂಗ ಪ್ರಮಾಣ ಪತ್ರ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ಪ್ರಥಮ ಪುಟದ ಪ್ರತಿಯನ್ನು ಲಗತ್ತಿಸಿರಬೇಕು.

**ಈ ಎರಡು ವಿದ್ಯಾರ್ಥಿವೇತನಗಳಿಗೆ ಅರ್ಜಿಗಳನ್ನು ಡಾ|ವೈ.ಸುದರ್ಶನ್ ರಾವ್, ಕೆನರಾ ಹೆಲ್ತ್‌ಸೆಂಟರ್, ಅಂಜುಮಾನ್ ರಸ್ತೆ, ಸಿಟಿ ಬಸ್ಸ್ಟಾಂಡ್ ಬಳಿ, ಉಡುಪಿ-576101 ಇಲ್ಲಿಗೆ ತಾ.30-11-2012ರೊಳಗೆ ತಲುಪುವಂತೆ ಕಳುಹಿಸಬೇಕಾಗಿ ವಿನಂತಿ.**

# ಸೌಂದರ್ಯ ಲಹರೀ ಕೋಟ್ಯರ್ಚನೆ ಸಪ್ತಾಹ-2012

**ದಿನಾಂಕ 04-11-2012ರಿಂದ 10-11-2012ರವರೆಗೆ ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ಅಶ್ವಯುಜ ಕೃಷ್ಣ ಪಂಚಮೀ ಭಾನುವಾರ, ದಿನಾಂಕ 04-11-2012ರಿಂದ ಏಕಾದಶೀ ಶನಿವಾರ, ದಿನಾಂಕ 10-11-2012ರವರೆಗೆ ಸೌಂದರ್ಯ ಲಹರೀ ಕೋಟ್ಯರ್ಚನೆ - ಸಪ್ತಾಹವು ಶ್ರೀ ಶಾರದಾ ಮಂಟಪದಲ್ಲಿ ಪ್ರತಿ ದಿನ ಸಂಜೆ ಗಂಟೆ 4-30ರಿಂದ 5-30ರ ತನಕ ನಡೆಯಲಿದೆ. ದಿನಾಂಕ 09-11-2012 ಶುಕ್ರವಾರದಂದು ಅಖಂಡ ಪಾರಾಯಣ ನಡೆಯಲಿದೆ.**

**ಆಸಕ್ತ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀದೇವಿಯ ಸರ್ವಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಶ್ರೀ ಶಾರದಾ ಮಂಟಪದ ಆಡಳಿತ ಮಂಡಳಿ, ಸ್ಥಾನಿಕ ಬ್ರಾಹ್ಮಣ ಸಂಘ ಮತ್ತು ಜ್ಞಾನಭಾರತೀ, ಉಡುಪಿಯ ಸದಸ್ಯರು ಕೋರುತ್ತಿದ್ದಾರೆ.**

**-ಎಸ್.ಎಲ್.ಕಾರ್ಣಿಕ್**

# ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ ನಿ., ಇದರ 2011-12ನೇ ಸಾಲಿನ ವಾರ್ಷಿಕ ಮಹಾಸಭೆ

ಉಡುಪಿಯ ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯ 2011-12ನೇ ಸಾಲಿನ ಸರ್ವಸದಸ್ಯರ ಸಭೆಯು ತಾ.23-9-12 ನೇ ರವಿವಾರ ಬೆಳಿಗ್ಗೆ 10-30 ಗಂಟೆಗೆ ಸೊಸೈಟಿಯ ಕಚೇರಿಯಿರುವ ಭೂವರಾಹ ಸಂಕೀರ್ಣದ ಸಭಾಭವನದಲ್ಲಿ ನಡೆಯಿತು. ಅಧ್ಯಕ್ಷರಾದ ಮಾರ್ಪಳ್ಳಿ ಸದಾನಂದರಾಯರ ಅಧ್ಯಕ್ಷತೆಯಲ್ಲಿ ನಡೆದ ಸಭೆಯು ಸಾಮೂಹಿಕ ಪ್ರಾರ್ಥನೆಯೊಂದಿಗೆ ಆರಂಭವಾಯಿತು.

ಆಗಮಿಸಿರುವ ಸರ್ವಸದಸ್ಯರನ್ನೂ ಸ್ವಾಗತಿಸಿದ ಅಧ್ಯಕ್ಷರು ಸತತವಾಗಿ ಲಾಭಗಳಿಸುತ್ತಾ ಬಂದಿರುವ ನಮ್ಮ ಸೊಸೈಟಿಯು ಸಾರ್ವಜನಿಕವಾಗಿ ಉತ್ತಮ ಕೆಲಸವನ್ನು ಸಾಧಿಸುತ್ತಿದೆ. ಹಾಗೆಯೇ ಸೊಸೈಟಿಯ ಕಾರ್ಯನಿರತ ಬಂಡವಾಳವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸದಸ್ಯ ಬಾಂಧವರು ಪಾಲು ಬಂಡವಾಳ ಹಾಗೂ ಠೇವಣಿಗಳಲ್ಲಿ ಹಣ ತೊಡಗಿಸಿ ಸಹಕರಿಸಬೇಕು ಎಂದರು. ಈಗಾಗಲೇ ಪ್ರಾರಂಭಗೊಂಡ ಸೊಸೈಟಿಯ ಪ್ರಥಮ ಶಾಖೆ ಉಡುಪಿ ಕುಕ್ಕಿಕಟ್ಟೆ ಹಾಗೂ ಈ ಬಾರಿ ಪಡುಬಿದ್ರಿಯಲ್ಲಿ ತೆರೆದ ಶಾಖೆಗಳು ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿದೆ.

ವರದಿ ವರ್ಷದಲ್ಲಿ ರೂ.3.65 ಕೋಟಿ ಕಾರ್ಯನಿರತ ಬಂಡವಾಳ ಹೊಂದಿರುವ ಸಂಸ್ಥೆ 2011-12ನೇ ಸಾಲಿನಲ್ಲಿ ರೂ.5 ಲಕ್ಷ ನಿವ್ವಳ ಲಾಭಗಳಿಸಿದೆ ಎಂದರು. ಸೊಸೈಟಿಯ ಅಭಿವೃದ್ಧಿಗೆ ಸಹಕರಿಸಿದ ಸದಸ್ಯರಿಗೆ, ಸಿಬ್ಬಂದಿ ವರ್ಗದ ಎಲ್ಲರಿಗೂ ಕೃತಜ್ಞತೆ ಎಂದರು.

2011-12ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು. 2011-12ನೇ ಸಾಲಿನ ಲಾಭ-ನಷ್ಟದ ತಃಖ್ತೆ ಹಾಗೂ ಆಸ್ತಿ ಜವಾಬ್ದಾರಿ ತಃಖ್ತೆಗಳನ್ನು ಕಾರ್ಯದರ್ಶಿಯವರಾದ ಪಟ್ಟಾಭಿರಾಮ ಸಭೆಯ ಮುಂದಿಟ್ಟರು. ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು. 2012-13ನೇ ಸಾಲಿನ ಅಂದಾಜು ಆಯವ್ಯಯ ತಃಖ್ತೆಯನ್ನು ಸಭೆಯು ಅನುಮೋದಿಸಿತು. 2011-12ನೇ ಸಾಲಿನಲ್ಲಿ ಸೊಸೈಟಿಯ ಪ್ರಾಥಮಿಕ ಸದಸ್ಯರಿಗೆ **ಶೇ.12** ಲಾಭಾಂಶ ನೀಡುವರೇ ನಿರ್ದೇಶಕ ಮಂಡಳಿ ಮಾಡಿದ್ದ ಶಿಫಾರಸ್ಸನ್ನು ಸರ್ವಸದಸ್ಯರ ಸಭೆಯು ಅನುಮೋದಿಸಿತು.

ಕೊನೆಯಲ್ಲಿ ನಿರ್ದೇಶಕರಾದ ಯು.ಅರವಿಂದ ಕುಮಾರ್ ಧನ್ಯವಾದವನ್ನಿತ್ತರು. ವೇದಿಕೆಯಲ್ಲಿ ಅಧ್ಯಕ್ಷರಾದ ಎಮ್.ಸದಾನಂದ ರಾವ್, ಉಪಾಧ್ಯಕ್ಷರಾದ ಕೆ.ವೇಣುಗೋಪಾಲ ರಾವ್, ಪ್ರಧಾನ ವ್ಯವಸ್ಥಾಪಕ ಎನ್.ಎಸ್. ಪಟ್ಟಾಭಿರಾಮ, ನಿರ್ದೇಶಕರಾದ ಬಿ.ಕೃಷ್ಣಮೂರ್ತಿ ರಾವ್, ಯು.ಅರವಿಂದ ಕುಮಾರ್, ಯು.ಪ್ರಫುಲ್ಲ ಚಂದ್ರ, ವೈ.ಪ್ರಕಾಶ್ ಕುಮಾರ್, ವೈ.ಮುರಳೀಕೃಷ್ಣ ರಾವ್, ಕೆ. ಮಂಜುನಾಥ ಹೆಬ್ಬಾರ್, ಗೀತಾ ಕೃಷ್ಣಕುಮಾರ್ ಉಪಸ್ಥಿತರಿದ್ದರು.

- ಕಾರ್ಯದರ್ಶಿ

# ಯರ್ಲಪಾಡಿ ಪಿಡಿಒ ಮೋಹನ್ ರಾವ್‌ರವರಿಗೆ ಪ್ರಶಸ್ತಿ



ಯರ್ಲಪಾಡಿ ಗ್ರಾಂ.ಪಂ ಪಿಡಿಒ ಮೋಹನ ರಾವ್ ಅವರಿಗೆ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರು ಸ್ವಾತಂತ್ರ್ಯೋತ್ಸವದ ಅಂಗವಾಗಿ 'ವೈಯಕ್ತಿಕ ಪ್ರಶಸ್ತಿ-2012'ನ್ನು ಉಡುಪಿಯ ಅಜ್ಜರಕಾಡಿನ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಸ್ವಾತಂತ್ರ್ಯೋತ್ಸವ ಸಂದರ್ಭ ಪ್ರದಾನ ಮಾಡಿದರು.

ಭಾರತ್ ನಿರ್ಮಾಣ ಸ್ವಯಂ ಸೇವಕರು ಗ್ರಾಮದಲ್ಲಿ ನಡೆಸಿದ ನಾನಾ ಅಭಿವೃದ್ಧಿ ಕಾಮಗಾರಿಗಳ ವೀಡಿಯೋ ಚಿತ್ರಣ ಹಾಗೂ ಭಾವಚಿತ್ರವನ್ನು ಇತ್ತೀಚೆಗೆ ಲಕ್ನೋದಲ್ಲಿ ನಡೆದ ರಾಷ್ಟ್ರಮಟ್ಟದ ಕಾರ್ಯಕ್ರಮದಲ್ಲಿ ಪ್ರದರ್ಶಿಸಲಾಗಿತ್ತು. ಅಲ್ಲಿ ಕಾರ್ಕಳ ತಾಲೂಕು ಪ್ರಥಮ ಸ್ಥಾನಗಳಿಸುವ ಮೂಲಕ ರಾಷ್ಟ್ರಮಟ್ಟದಲ್ಲಿ ಸಾಧನೆಗೈದಿತ್ತು. ತಾಲೂಕಿನ ಮಾಳ ಮತ್ತು ಯರ್ಲಪಾಡಿಯಲ್ಲಿ ಭಾರತ್ ನಿರ್ಮಾಣ ಸ್ವಯಂ ಸೇವಕರು ನಡೆಸಿದ ದಾಖಲೆಯ ಸಾಧನೆಗಳ ಪ್ರಯುಕ್ತ ಅತ್ಯುತ್ತಮ ತಂಡ ಪ್ರಶಸ್ತಿ ಲಭಿಸಿತ್ತು. ಈ ಹಿನ್ನೆಲೆಯಲ್ಲಿ ಸಾಧನೆಗೆ ಕಾರಣೀಕರ್ತರಾದ ಗ್ರಾಮ ಪಂಚಾಯಿತಿ ಪಿಡಿಒಗಳನ್ನು ವೈಯಕ್ತಿಕ ಪ್ರಶಸ್ತಿ ನೀಡಿ ಅಭಿನಂದಿಸುವ ಕಾರ್ಯಕ್ರಮವನ್ನು ಉಡುಪಿ ಜಿಲ್ಲಾ ಪಂಚಾಯಿತಿ ಆಯೋಜಿಸಿತ್ತು.

ರಾಜ್ಯ ಮೂರನೇ ಹಣಕಾಸು ಆಯೋಗದ ಶಿಫಾರಸು ಅನುಷ್ಠಾನ ಸಮಿತಿ ಅಧ್ಯಕ್ಷ ಎ.ಜಿ.ಕೊಡ್ಗಿ, ಉಡುಪಿ ಶಾಸಕ ಕೆ. ರಘುಪತಿ ಭಟ್, ಜಿಲ್ಲಾಧಿಕಾರಿ ಡಾ.ಎಂಟಿ.ರೇಜು, ಜಿಪಂ.ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಎ.ಪ್ರಭಾಕರ್ ಶರ್ಮಾ ಉಪಸ್ಥಿತರಿದ್ದರು.

ಕೃಪೆ : ವಿಜಯಕರ್ನಾಟಕ

## ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ

### ಅಕ್ಟೋಬರ್ ತಿಂಗಳ ಕಾರ್ಯಕ್ರಮಗಳು

ದರ್ಶನ ಸಮಯ : ಬೆಳಿಗ್ಗೆ 5.00 ರಿಂದ ರಾತ್ರಿ 8.00
ಪೂಜಾ ಸಮಯ (ಮಂಗಳಾರತಿ) : ಪಾತ್ರಃ ವೇದೋಕ್ತ ಪೂಜೆ 6.00ರಿಂದ 6.30
ಮಧ್ಯಾಹ್ನ : ಕಲ್ಪೋಕ್ತ ಪೂಜೆ 12.00ರಿಂದ 12.30
ಸಾಯಂಕಾಲ : ಪುರಾಣೋಕ್ತ ಪೂಜೆ 7.30ರಿಂದ 8.00

- ಪ್ರತಿನಿತ್ಯ ಸಾಯಂಕಾಲ ಸೇವಾದಾರರ ವತಿಯಿಂದ ರಂಗಪೂಜೆ, ಪ್ರತಿನಿತ್ಯ ಸುಬ್ರಹ್ಮಣ್ಯ ಹೋಮ.
- ಪ್ರತೀ ದಿನ ಮಧ್ಯಾಹ್ನ 1.00ರಿಂದ 3.00ರವರೆಗೆ ನಿತ್ಯಾನ್ನದಾನ.
- ಪ್ರತೀ ಶನಿವಾರ ಸಾಯಂಕಾಲ 5.00ರಿಂದ ಆಂಜನೇಯ ಸನ್ನಿಧಿಯಲ್ಲಿ ಶ್ರೀ ರಾಮ ಸಂಕೀರ್ತನೆ ಹಾಗೂ ತೈಲಾಭಿಷೇಕ.

**ತಾ.14.10.2012** ಸಾಲಿಗ್ರಾಮ ಮಕ್ಕಳ ಮೇಳದವರಿಂದ ಸಾಯಂಕಾಲ 4.00ಕ್ಕೆ **"ವೀರ ಬಭ್ರುವಾಹನ" ಯಕ್ಷಗಾನ ಪ್ರದರ್ಶನ.**

**ತಾ.16.10.2012ರಿಂದ 24.10.2012ವರೆಗೆ** ಶ್ರೀ ಶಾರದಾ ಸನ್ನಿಧಿಯಲ್ಲಿ ನವರಾತ್ರಿ ಉತ್ಸವ, ವಿಜಯದಶಮಿ ಆಚರಣೆ, ಸೇವೆಗಳು. (ವಿಜಯ ದಶಮಿ ದಿನ ಮಕ್ಕಳಿಗೆ ಅಕ್ಷರಾಭ್ಯಾಸ) ***ಪ್ರತಿನಿತ್ಯ ಸೇವಾದಾರರಿಂದ ಚಂಡಿಕಾ ಯಂತ್ರ ಪೂಜೆ, ದುರ್ಗಾನಮಸ್ಕಾರ, ಚಂಡಿಕಾಹೋಮ. ಆಸಕ್ತರಿಂದ ಸಪ್ತಶತೀ ಪಾರಾಯಣ, ದೇವಳದ ವತಿಯಿಂದ ನಿತ್ಯಾನ್ನದಾನ.***

ತಾ.17-10-2012 **ತುಲಾ ಸಂಕ್ರಮಣ, ಸಮಾರಾಧನೆ.**
ತಾ.19-10-2012 **ಶುದ್ದ ಪಂಚಮಿ, ನಾಗಸನ್ನಿಧಿಯಲ್ಲಿ ಸೇವೆಗಳು.**
ತಾ.24-10-2012 **ಕದಿರು ಕಟ್ಟುವುದು**

**ತಾ.01-11-2012ರಂದು ಸಮಯ : ಮಧ್ಯಾಹ್ನ 2-00ರಿಂದ ರಾತ್ರಿ 10-00ರ ವರೆಗೆ**
**ಜಿಲ್ಲೆಯ ಸುಪ್ರಸಿದ್ಧ ಕಲಾವಿದರ ಕೂಡುವಿಕೆಯಿಂದ ಅಕ್ಷರ ಯಕ್ಷಗಾನ ಬಯಲಾಟ**
ಶ್ರೀ ಮಹಾಮುನಿ ಕಪಿಲ

## ಉದಯಾದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ

**ಪಡುಬಿದ್ರಿ, ಉಡುಪಿ ಜಿಲ್ಲೆ.**

ಭಕ್ತಾಭಿಮಾನಿಗಳೇ,

ಸ್ವಸ್ತಿ ಶ್ರೀ ನಂದನ ನಾಮ ಸಂ।ರದ ತುಲಾ ಮಾಸ ದಿನ ೬ ಸಲುವ ಅಶ್ವಿಜ ಶುದ್ಧ ೮ಯು (ದುರ್ಗಾಷ್ಟಮಿಯ ದಿನ) ತಾ.22-10-2012ನೇ ಸೋಮವಾರ ಶ್ರೀ ಕ್ಷೇತ್ರದಲ್ಲಿ ವರ್ಷಂಪ್ರತಿಯಂತೆ

### ಚಂಡಿಕಾ ಹೋಮ

ಜರಗಲಿರುವುದು.


ಈ ಕಾರ್ಯಕ್ರಮವು ಮಧ್ಯಾಹ್ನ 12.30ಕ್ಕೆ ಸರಿಯಾಗಿ ಪೂರ್ಣಾಹುತಿಯೊಂದಿಗೆ ಸಂಪನ್ನಗೊಳ್ಳಲಿದೆ. ಈ ಸಂದರ್ಭದಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಶ್ರೀದೇವರ ಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

**ಮೊಕ್ತೇಸರರು,** ಉದಯಾದ್ರಿ ಶ್ರೀ ಬಾಲಗಣಪತಿ
ಪ್ರಸನ್ನಪಾರ್ವತಿ ದೇವಸ್ಥಾನ, ಪಡುಬಿದ್ರಿ. ಮೊ.:.9448626220

ವಿ.ಸೂ.:

- ಸೇವೆಯಲ್ಲಿ ಭಾಗವಹಿಸುವವರು ರೂ.101/-ನ್ನು ಕೊಟ್ಟು ರಶೀದಿಯನ್ನು ಪಡೆಯತಕ್ಕದ್ದು.
- ಪೂರ್ಣಾಹುತಿಗೆ ಬೇಕಾದ ತುಪ್ಪ, ತೆಂಗಿನಕಾಯಿ, ಬಾಳೆಹಣ್ಣು, ಅಡಿಕೆ, ವೀಳ್ಯದೆಲೆ, ಪುಷ್ಪ ಇತ್ಯಾದಿಗಳನ್ನು ನೀಡಬಹುದು.
- ದೇವಸ್ಥಾನದ ಜೀರ್ಣೋದ್ಧಾರ ನಿಧಿಗೆ ದೇಣಿಗೆಯನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲಾಗುವುದು. ಅಥವಾ ಪಡುಬಿದ್ರಿ, ಕರ್ನಾಟಕ ಬ್ಯಾಂಕ್ ಖಾತೆ ನಂ.671ಕ್ಕೆ ಕಳುಹಿಸಬಹುದು.
- ಭಕ್ತಾದಿಗಳು ನೀಡುವ ಹಸಿರು ವಾಣಿ ಹಾಗೂ ಹೊರೆಕಾಣಿಕೆಗಳನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲಾಗುವುದು.
- ಪ್ರತಿದಿನ ಸಾಯಂಕಾಲ ಗಂಟೆ 7-30ಕ್ಕೆ ನವರಾತ್ರಿ ವಿಶೇಷ ಪೂಜೆ ನಡೆಯಲಿರುವುದು. ಪೂಜೆ ಒಂದರ ಬಾಬ್ತು ರೂ.300/-.


*Krishna Rao*
Ph : 2520652
Mob. : 9902029048


**KISHAN**
**Studio & Video**


**Indoor Photography & Port Folio Photography, Video & Mixing, Lamination**
MAIN ROAD, MAJOOR & BANTAKAL.


## ನಿಧನ

### ಕೆ. ಶ್ರೀನಿವಾಸ ರಾಯರು

ಮಂಗಳೂರು ಕೋಡಿಕಲ್ಲಿನಲ್ಲಿರುವ ಶ್ರೀ ಕೆ.ಶ್ರೀನಿವಾಸರಾಯರು ಅಲ್ಪ ಕಾಲದ ಅಸೌಖ್ಯದಿಂದಾಗಿ ತಮ್ಮ 63ನೇ ವರ್ಷ ಪ್ರಾಯದಲ್ಲಿ ತಾ.5-9-2012ರಂದು ನಿಧನ ರಾದರು. ಶ್ರೀಯುತರು ಪತ್ನಿ ಮತ್ತು ಈರ್ವರು ಪುತ್ರಿಯರನ್ನು ಅಗಲಿದ್ದಾರೆ. ಅಗಲಿದ ಇವರ ಆತ್ಮಕ್ಕೆ ಅಳಿಯ ಕೆ.ನವೀನ ಕುಮಾರ್ ಶ್ರೀಮತಿ ಮೋಹಿನಿ ಶಾಸ್ತ್ರಿ ಮತ್ತು ಶ್ರೀ ಕೆ. ದೇವರಾಯ ಶಾಸ್ತ್ರಿಯವರು ಚಿರಶಾಂತಿಯನ್ನು ಕೋರಿರು ತ್ತಾರೆ.

★★★ ★★★

### ಉಡುಪಿ ಅಣ್ಣಾಜಿ ರಾವ್

ಮಂಗಳೂರಿನಲ್ಲಿ ವಾಸವಾಗಿದ್ದ ಶ್ರೀಯುತ ಉಡುಪಿ ಅಣ್ಣಾಜಿರಾವ್ (80 ವರ್ಷ) ಇವರು ತಾ.31-08-2012ರಂದು ನಿಧನ ಹೊಂದಿದರು. ಇವರ ಅಂತಿಮ ಇಚ್ಛೆಯಂತೆ ಸಂಪೂರ್ಣ ದೇಹದಾನವನ್ನು ಮಂಗಳೂರಿನ ಎ.ಜೆ. ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸಯನ್ಸ್‌ಗೆ ವೈದ್ಯಕೀಯ ವ್ಯಾಸಂಗಕ್ಕಾಗಿ ಹಸ್ತಾಂತರಿಸ ಲಾಯಿತು. ವೈದ್ಯಕೀಯ ವ್ಯಾಸಂಗಕ್ಕಾಗಿ ದೇಹದಾನ ಮಾಡಿದ ಶ್ರೀಯುತರು ಪ್ರಾತಃ ಸ್ಮರಣೀಯರು. ಇವರು ತಮ್ಮ ಪತ್ನಿ, ಪುತ್ರ ಹಾಗೂ ಬಂಧುಬಳಗವನ್ನು ಅಗಲಿದ್ದಾರೆ.

★★★ ★★★

### ನಂದಿಕೂರು ಸಂಜೀವ ರಾವ್

ನಂದಿಕೂರು ಸಂಜೀವ ರಾವ್ (70 ವರ್ಷ) ಇವರು ತಾ.17-09-2012ರಂದು ನಿಧನ ಹೊಂದಿದರು. ಇವರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಬಳಗ ವನ್ನು ಅಗಲಿದ್ದಾರೆ.

★★★ ★★★

### ಶ್ರೀ ಶಂಕರಯ್ಯ ಎಚ್.ಟಿ.

ಕಾರ್ಕಳ ಬಜಗೋಳಿ ನಿವಾಸಿ ಶ್ರೀ ಶಂಕರಯ್ಯ ಎಚ್.ಟಿ. (84 ವರ್ಷ) ಇವರು ತಾ.21-09-2012ರಂದು ನಿಧನ ರಾದರು. ಇವರು ಪತ್ನಿ, ಮಕ್ಕಳು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

## ಮಾಂಗಲ್ಯಂ ತಂತುನಾನೇನ ....

ಎಲ್ಲೂರಿನ ಕೀರ್ತಿಶೇಷ ಎ. ಭವಾನಿ ಶಂಕರರಾಯರ ಪುತ್ರ **ರವಿರಾಜ** ಹಾಗೂ ಕೀರ್ತಿಶೇಷ ಎಚ್.ಹರೀಶ್ಚಂದ್ರ ಭಟ್ಟರ ಪುತ್ರಿ **ವಿದ್ಯಾಶಂಕರಿ** ಇವರ ವಿವಾಹವು ತಾ.23-09-2012ರಂದು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಪಂಡಿತ ಶ್ರೀ ಎಚ್. ಸುಬ್ರಾಯ ಭಟ್ ಸ್ಮಾರಕ ಶ್ರೀ ಶಾರಧ್ವತ ಯಜ್ಞಾಂಗಣದಲ್ಲಿ ನೆರವೇರಿತು.

## ಕವಿತೆಗಳು

### ಮಳೆಹನಿ

ಆಗಸದ ಯಾವುದೋ ಮೂಲೆಯಿಂದ
ತಟ್ಟೆಂದು ಬಿದ್ದ ಮೊದಲ ಮಳೆಹನಿ
ಭೂಮಿಯನ್ನು ಕೇಳಿತು ಕ್ಷೇಮವೇ ?

### ಮನ

ಅರಿಯದ ದಾರಿಯಿದು...
ಕಾಣದ ಜಾಗವಿದು...
ನಿರ್ಜನ ಸ್ಥಳವಿದು...
ಬೇರೇನಲ್ಲ...
ನನ್ನದೇ ಮನವಿದು !

### ಬೆಳ್ಳಿ ಮಿಂಚು

ಗೋಜಲಾಗಿರುವ ಕನಸುಗಳು
ಕಪ್ಪು ಕೆಂಪು
ಆದರೂ ದೂರದಲ್ಲೊಂದು ಬೆಳ್ಳಿಮಿಂಚು !

### ಜಂಜಡ

ಕೊರತೆಗಳೇ ಜೀವನವಾದರೆ
ಬದುಕು ಸುಖವಾಗಿರಬಹುದೇ..?
ಎಲ್ಲಾ ಗೊತ್ತಿದೆ ಈ ಮನಸ್ಸಿಗೆ
ಆದರೂ ಹೊರ ಬರಲು ಆಗುತ್ತಿಲ್ಲ.
ಏಕೆಂದರೆ ದಾರಿ ಕಾಣುತ್ತಿಲ್ಲ !

**-ಎಚ್.ರಶ್ಮಿ ರಾವ್, ಉಳಿಯಾರು, ಮಜೂರು**





**RAJESH POWER PRESS**
**PRINTERS & PUBLISHERS**
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
**QUALITY FIRST AND ALWAYS**



# ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ



ಡಾ। ವೈ. ಸುದರ್ಶನ ರಾವ್

**ಪ್ರಶ್ನೆ: ನಮ್ಮದೇಹದಲ್ಲಿಕೊಲೆಸ್ಟಿರಾಲ್ (CHOLESTEROL) ನ ಅಂಶಹೆಚ್ಚಾಗಲುಕಾರಣವೇನು? ಇದರಿಂದ ಏನು ತೊಂದರೆಯಾಗುತ್ತದೆ? ಅದರ ಚಿಕಿತ್ಸೆ ಹೇಗೆ?**

**ಉತ್ತರ :** ನಾವು ತಿನ್ನುವ ಆಹಾರವನ್ನು ಶರ್ಕರ ಪಿಷ್ಟಗಳು (CARBOHYDRATES), ಪ್ರೋಟಿನುಗಳು (PROTEIN) ಹಾಗೂ ಕೊಬ್ಬು(FAT) ಎಂದು ಮೂರು ವಿಧವಾಗಿ ವಿಂಗಡಿಸಬಹುದು. ಈ ಮೂರೂ ವಿಧದ ಆಹಾರ ಪದಾರ್ಥಗಳು ನಮ್ಮ ದೇಹಕ್ಕೆ ಶಕ್ತಿಯ ಮೂಲಗಳೇ ಆಗಿದ್ದರೂ ಅದರಲ್ಲಿ ಶರ್ಕರ ಪಿಷ್ಟಗಳನ್ನು ಮಾತ್ರ ಶಕ್ತಿಯ ಮೂಲವನ್ನಾಗಿ ಪ್ರಥಮ ಪ್ರಾಶಸ್ತ್ಯ ನೀಡಿ ಉಪಯೋಗಿಸಿಕೊಳ್ಳುತ್ತದೆ. ಹಾಗೆಯೇ ಪ್ರೋಟಿನುಗಳನ್ನು ದೇಹದ ಬೆಳವಣಿಗೆಗೂ ಹಾಗೂ ಕೊಬ್ಬುಗಳನ್ನು ಶಕ್ತಿಯನ್ನು ಕೂಡಿಡುವುದಕ್ಕಾಗಿ ಉಪಯೋಗಿಸಿಕೊಳ್ಳುತ್ತದೆ. ಒಂದು ವೇಳೆ ದೇಹಕ್ಕೆ ಶರ್ಕರ ಪಿಷ್ಟಗಳು ಆಹಾರದಲ್ಲಿ ಸಿಗದಿದ್ದಲ್ಲಿ (ಉಪವಾಸವಿದ್ದಾಗ) ಅಥವಾ ಸಿಕ್ಕಿದ್ದು ಸಾಕಾಗದಿದ್ದಲ್ಲಿ (MALNUTRITION) ಆವಾಗ ದೇಹವು ಪ್ರೋಟಿನುಗಳನ್ನು ಹಾಗೂ ಕೊಬ್ಬನ್ನು ಶಕ್ತಿಯ ಮೂಲವನ್ನಾಗಿ ಬಳಸುತ್ತದೆ.

ಆರೋಗ್ಯದ ವಿಷಯವನ್ನು ಗಣನೆಗೆ ತೆಗೆದುಕೊಳ್ಳುವಾಗ ವೈದ್ಯರು ದೇಹದಲ್ಲಿ ಎರಡು ಬಗೆಯ ಕೊಬ್ಬುಗಳಿಗೆ ಪ್ರಾಶಸ್ತ್ಯ ಕೊಡುತ್ತಾರೆ. ಒಂದು ಕೊಲೆಸ್ಟಿರಾಲ್ ಹಾಗೂ ಇನ್ನೊಂದು ಟ್ರೈಗ್ಲಿಸರೈಡ್ (TRIGLYCERIDE)

ಕೊಲೆಸ್ಟಿರಾಲ್, ನಮ್ಮ ದೇಹದಲ್ಲಿ ಜೀವಕೋಶಗಳ ಗೋಡೆಗಳ ರಚನೆಗೂ ಹಾಗೂ ಜೀವಕೋಶದ ಒಳಗೂ ಹೊರಗೂ ಇರುವ ಅನೇಕ ಪೊರೆಗಳ (MEMBRANE) ರಚನೆಗೂ ಬೇಕಾಗುವ ಮೂಲವಸ್ತು. ಇದು ನಮ್ಮ ನರವ್ಯೂಹದ ಕಾರ್ಯನಿರ್ವಹಣೆಗೂ ಅಗತ್ಯವಾಗಿಬೇಕು. ಪಿತ್ತರಸದಲ್ಲಿ ಇದರ ಅಂಶ ಶೇಕಡಾ ಮೂವತ್ತರಷ್ಟಿದೆ, ನಮ್ಮ ದೇಹದಲ್ಲೇ ತಯಾರಾಗುವ ವಿಟಮಿನ್ ಡಿ ಹಾಗೂ ಅನೇಕ ಹಾರ್ಮೋನ್‌ಗಳ ತಯಾರಿಕೆಗೆ ಇದೇ ಕಚ್ಚಾವಸ್ತು. ಹಾಗಾಗಿ ಕೊಲೆಸ್ಟಿರಾಲ್ ನಮ್ಮ ದೇಹಕ್ಕೆ ಬೇಕಾದ ಪದಾರ್ಥ.

ನಮ್ಮ ದೇಹಕ್ಕೆ ಬೇಕಾಗುವ ಕೊಲೆಸ್ಟಿರಾಲ್ ನಮ್ಮ ದೇಹದಲ್ಲೇ (ಪಿತ್ತಜನಕಾಂಗದಲ್ಲಿ) ತಯಾರಾಗುತ್ತದೆ. ಇನ್ನು ಸ್ವಲ್ಪಾಂಶವನ್ನು ನಾವು ಆಹಾರದ ಮೂಲಕ ಪಡೆಯುತ್ತೇವೆ. ನಮ್ಮ ದೇಹದಲ್ಲಿ ಕೊಲೆಸ್ಟಿರಾಲ್‌ನ ಮಟ್ಟದ ನಿಯಂತ್ರಣಕ್ಕೆ ವ್ಯವಸ್ಥೆಯೂ ಇದೆ. ದೇಹದಲ್ಲಿ ಕೊಲೆಸ್ಟಿರಾಲ್ ಅಂಶ ಹೆಚ್ಚಾದರೆ ಪಿತ್ತಜನಕಾಂಗವು ಅದನ್ನು ತಯಾರಿಸುವುದನ್ನು ನಿಲ್ಲಿಸಿ ಪಿತ್ತರಸದ ಮೂಲಕ ಕರುಳಿಗೆ ಸ್ರವಿಸುತ್ತದೆ. ದೇಹಕ್ಕೆ ಕೊಲೆಸ್ಟಿರಾಲ್ ಬೇಕಾದಾಗ ಪಿತ್ತಜನಕಾಂಗವು ಅದನ್ನು ತಯಾರಿಸುತ್ತದೆ. ಪಿತ್ತಜನಕಾಂಗದಲ್ಲಿ ತಯಾರಾದ ಕೊಲೆಸ್ಟಿರಾಲ್ ಲೋ ಡೆನ್ಸಿಟಿ ಲೈಪೋಪ್ರೋಟೀನ್ (LDL) ಎಂಬ ರೂಪದಲ್ಲಿ ರಕ್ತದಲ್ಲಿ ಸಂಚರಿಸುತ್ತದೆ. ಅದೇ ರೀತಿ ಪಿತ್ತಜನಕಾಂಗದ ಮೂಲಕ ದೇಹದಿಂದ ಹೊರ ಹೋಗಲಿರುವ ಕೊಲೆಸ್ಟಿರಾಲ್ ಹೈ ಡೆನ್ಸಿಟಿ ಲೈಪೋಪ್ರೋಟೀನ್ (HDL) ಎಂಬ ರೂಪದಲ್ಲಿರುತ್ತದೆ.

ರಕ್ತದಲ್ಲಿ ಸುಮಾರು 200ಎಂ.ಜಿ.ಯಷ್ಟು ಕೊಲೆಸ್ಟಿರಾಲ್ ಇರಬೇಕು. ಒಂದು ವೇಳೆ ತುಂಬಾ ಸಮಯದಿಂದ ಇದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಇದ್ದರೆ ಅದು ರಕ್ತನಾಳಗಳೊಳಗೆ ಅತಿರೋಮಾ (ATHEROMA) ಎಂಬ ರೂಪದಲ್ಲಿ ಶೇಖರವಾಗುತ್ತದೆ. ಇದರಿಂದಾಗಿ ರಕ್ತ ನಾಳಗಳ ವ್ಯಾಸವು ಅಲ್ಲಲ್ಲಿ ಕಿರಿದಾಗಿ ರಕ್ತಪರಿಚಲನೆಗೆ ಅಡ್ಡಿಯುಂಟಾಗುತ್ತದೆ. ಪ್ರತಿಯೊಬ್ಬರಲ್ಲಿಯೂ ವಯಸ್ಸಾದಂತೆ ರಕ್ತನಾಳಗಳೊಳಗೆ ಈ ರೀತಿ ಕೊಲೆಸ್ಟಿರಾಲ್ ಜಮಾವಣೆಯಾಗುವುದು ಒಂದು ಸಾಮಾನ್ಯ ಪ್ರಕ್ರಿಯೆ. ಆದರೆ ರಕ್ತದಲ್ಲಿ ಕೊಲೆಸ್ಟಿರಾಲ್ ಅಂಶ ಜಾಸ್ತಿ ಇದ್ದಲ್ಲಿ ಸಣ್ಣಪ್ರಾಯದಲ್ಲೇ ಅದು ರಕ್ತನಾಳಗಳಲ್ಲಿ ಜಮಾವಣೆ ಆಗುತ್ತದೆ. ಇನ್ನು ರಕ್ತದೊತ್ತಡ ಹೆಚ್ಚಿಗೆ ಇರುವವರಲ್ಲಿ, ಸಿಹಿಮೂತ್ರ ರೋಗಿಗಳಲ್ಲಿ ಹಾಗೂ ಸಿಗರೇಟು ಸೇವಿಸುವವರಲ್ಲಿ ಈ ಪ್ರಕ್ರಿಯೆ ಸಣ್ಣವಯಸ್ಸಿನಲ್ಲೇ ಆಗುವುದು ಮಾತ್ರವಲ್ಲ ತೀವ್ರರೂಪದಲ್ಲಿದ್ದು ದೇಹದ ಪ್ರಮುಖ ರಕ್ತನಾಳಗಳನ್ನು ಬಾಧಿಸುತ್ತದೆ. ಒಂದು ವೇಳೆ ಹೃದಯ, ಮೆದುಳು ಕೈಕಾಲುಗಳು ಇತ್ಯಾದಿ ಪ್ರಮುಖ ಅಂಗಗಳ ರಕ್ತನಾಳದಲ್ಲಿ ಈ ರೀತಿ ಅಡಚಣೆಯಾದರೆ ಅದರ ಪರಿಣಾಮವನ್ನು ನೀವೆ ಊಹಿಸಿಕೊಳ್ಳಬಹುದು.

ನಮ್ಮ ದೇಹದಲ್ಲಿ ಕೊಲೆಸ್ಟಿರಾಲ್‌ನ ಅಂಶ ಹೆಚ್ಚಾಗಲು ನಮ್ಮ ವಂಶವಾಹಿಗಳಾದ ಜೀನ್(GENE)ನ ರಚನೆಯಲ್ಲಿರುವ ಕೆಲವು ದೋಷಗಳೇ ಕಾರಣ. ಇನ್ನು ನಾವು ಸೇವಿಸುವ ಆಹಾರ ಹಾಗೂ ಕೆಲವು ಔಷಧಿಗಳ ಪ್ರಭಾವದಿಂದಲೂ ಕೊಲೆಸ್ಟಿರಾಲ್ ಅಂಶ ಹೆಚ್ಚಾಗಬಹುದು. ಇನ್ನು ಕೊಬ್ಬಿನ ಇನ್ನೊಂದು ಬಗೆಯಾದ ಟ್ರೈಗ್ಲಿಸರೈಡ್‌ನ ವಿಷಯಕ್ಕೆ ಬರುವುದಾದರೆ, ಇದು ನಮ್ಮ ದೇಹವು ಕೊಬ್ಬನ್ನು ಸಂಗ್ರಹಿಸಿಡುವ ರೂಪ. ನಾವು ಅಗತ್ಯವಿರುವದಕ್ಕಿಂತ ಹೆಚ್ಚು ಆಹಾರ (ಕ್ಯಾಲೋರಿ)ವನ್ನು ಯಾವುದೇ ರೂಪದಲ್ಲಿರಲಿ (ಶರ್ಕರಪಿಷ್ಟ, ಪ್ರೋಟೀನ್, ಕೊಬ್ಬು) ಸೇವಿಸಿದರೆ, ಮಿಕ್ಕಿದ ಆಹಾರವನ್ನು ದೇಹವು ಈ ರೂಪದಲ್ಲಿಸಂಗ್ರಹಿಸಿಡುತ್ತದೆ. ಆದುದರಿಂದ ಅಗತ್ಯಕ್ಕಿಂತ ಹೆಚ್ಚು ಕ್ಯಾಲೋರಿಗಳ ಸೇವನೆ ದೇಹದಲ್ಲಿ ಟ್ರೈಗ್ಲಿಸರೈಡ್‌ನ ಮಟ್ಟ ಹೆಚ್ಚಾಗಲು ಮುಖ್ಯ ಕಾರಣ. ಮೂತ್ರಜನಕಾಂಗದ ಖಾಯಿಲೆಗಳಲ್ಲೂ, ಸಿಹಿಮೂತ್ರ ಖಾಯಿಲೆಯಲ್ಲೂ, ಮದ್ಯಪಾನದಿಂದಲೂ ಥೈರಾಯ್ಡ್ ಗ್ರಂಥಿ ಸರಿಯಾಗಿ ಕೆಲಸ ಮಾಡದಿರುವುದರಿಂದಲೂ ದೇಹದಲ್ಲಿ ಟ್ರೈಗ್ಲಿಸರೈಡ್‌ನ ಅಂಶಹೆಚ್ಚಾಗುತ್ತದೆ. ಕೊಲೆಸ್ಟಿರಾಲ್ ಮಟ್ಟ ಹೆಚ್ಚಾದರೆ ಏನೇನು ತೊಂದರೆಗಳಾಗುತ್ತದೆಯೋ ಅವೆಲ್ಲ ತೊಂದರೆಗಳು ಇದರಿಂದಲೂ ಆಗುತ್ತದೆ. ರಕ್ತದಲ್ಲಿ ಟ್ರೈಗ್ಲಿಸರೈಡ್‌ನ ಮಟ್ಟ ಸುಮಾರು 150 MG ನೊಳಗೆ ಇರಬೇಕು.

ಸಾಮಾನ್ಯವಾಗಿ ವೈದ್ಯರು ರಕ್ತದಲ್ಲಿ ಒಟ್ಟು ಕೊಲೆಸ್ಟಿರಾಲ್, LDL, HDL, ಹಾಗೂ ಟ್ರೈಗ್ಲಿಸರೈಡ್‌ನ ಮಟ್ಟವನ್ನು ಅಳೆಯುತ್ತಾರೆ. ಅದರಲ್ಲಿ ಎಲ್ಲವೂ ಸಾಮಾನ್ಯ ಅಳತೆಯೊಳಗಿರಬೇಕಾದರೂ HDLನ ಮಟ್ಟ ಹೆಚ್ಚಿರುವುದು ಹಾಗೂ LDLನ ಮಟ್ಟ ಕಡಿಮೆ ಇರುವುದು ಒಳ್ಳೆಯದು.

ಹೆಚ್ಚಿನ ಕೊಲೆಸ್ಟಿರಾಲ್ ದೇಹದಲ್ಲಿಯೇ ತಯಾರಾಗುವುದರಿಂದ ರಕ್ತದಲ್ಲಿ ಅದರ ಮಟ್ಟ ಕಡಿಮೆಯಾಗಬೇಕಾದರೆ ಕೊಲೆಸ್ಟಿರಾಲ್‌ನ್ನು ಕಡಿಮೆ ಮಾಡುವ ಔಷಧಗಳನ್ನು ಸೇವಿಸಬೇಕಾಗುತ್ತದೆ. ಆಹಾರದಲ್ಲಿ ಕೊಬ್ಬಿನ ಅಂಶ ಕಡಿಮೆ ಮಾಡುವುದು ಸ್ವಲ್ಪ ಮಟ್ಟಿಗೆ ಸಹಾಯವಾಗಬಹುದು.

ಟ್ರೈಗ್ಲಿಸರೈಡ್‌ನ ಅಂಶ ಕಡಿಮೆಯಾಗಬೇಕಾದರೆ ಮೊತ್ತಮೊದಲನೆಯದಾಗಿ ನಾವು ಅಗತ್ಯಕ್ಕಿಂತ ಹೆಚ್ಚು ಆಹಾರ (ಕ್ಯಾಲೋರಿಲೆಕ್ಕದಲ್ಲಿ) ಸೇವಿಸಬಾರದು ಹಾಗೂ ತಿಂದ ಕ್ಯಾಲೋರಿಗಳನ್ನು ಖರ್ಚು ಮಾಡಲು ದೈಹಿಕ ಶ್ರಮ ಮಾಡಬೇಕು. ಮಾಂಸಾಹಾರ, ಮೊಟ್ಟೆ, ಗಿಣ್ಣು ಎಣ್ಣೆ ಪದಾರ್ಥಗಳು ದೇಹದಲ್ಲಿ ಕೊಲೆಸ್ಟಿರಾಲ್ ಹಾಗೂ ಟ್ರೈಗ್ಲಿಸರೈಡ್‌ನ ಮಟ್ಟವನ್ನು ಹೆಚ್ಚು ಮಾಡುತ್ತವೆ. ಸಕ್ಕರೆ ಖಾಯಿಲೆ ಇರುವವರು ಸಕ್ಕರೆಯ ಅಂಶವನ್ನು ಹತೋಟಿಯಲ್ಲಿಟ್ಟಿರಬೇಕು. ಥೈರಾಯ್ಡ್ ಗ್ರಂಥಿಯ ಹಾಗೂ ಮೂತ್ರಜನಕಾಂಗದ ತೊಂದರೆ ಇದ್ದರೆ ಅದಕ್ಕೆ ಸರಿಯಾದ ಚಿಕಿತ್ಸೆ ಮಾಡಬೇಕು. ಪ್ರಾಣಿಜನ್ಯಎಣ್ಣೆ(ಬೆಣ್ಣೆ, ತುಪ್ಪ)ಗಿಂತ (ಮೀನುಹೊರತುಪಡಿಸಿ) ಸಸ್ಯಜನ್ಯ ಎಣ್ಣೆಗಳ ಬಳಕೆ ಉತ್ತಮ. ಸಸ್ಯಜನ್ಯ ಎಣ್ಣೆಗಳಲ್ಲಿ ಆಲಿವ್ ಎಣ್ಣೆಯಲ್ಲಿ ನಮ್ಮ ದೇಹದಲ್ಲಿ ಕೊಲೆಸ್ಟಿರಾಲ್ ಮತ್ತು ಟ್ರೈಗ್ಲಿಸರೈಡ್‌ನ ಮಟ್ಟವನ್ನು ಏರಿಸುವ ಕೊಬ್ಬಿನ ಅಂಶ ತುಂಬಾ ಕಡಿಮೆ ಇದೆ. ಅದೇ ಸನ್‌ಫ್ಲವರ್ ಎಣ್ಣೆ ಹಾಗೂ ಕಡಲೆ ಹಾಗೂ ತೆಂಗಿನ ಎಣ್ಣೆಗಳಲ್ಲಿ ಈ ವಿಷಯದಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸ ಮಾತ್ರ ಇದೆ. ಎಣ್ಣೆ ಯಾವುದೇ ಆಗಿದ್ದರೂ ಕರಿದ ಎಣ್ಣೆಯ ಮರುಬಳಕೆ ಒಳ್ಳೆಯದಲ್ಲ. ವಿಶೇಷವೆಂದರೆ ಸೊಪ್ಪು ಹಾಗೂ ಹಸಿರು ತರಕಾರಿಗಳ ಸೇವನೆ ಕೊಲೆಸ್ಟಿರಾಲ್ ಹಾಗೂ ಟ್ರೈಗ್ಲಿಸರೈಡ್‌ಗಳ ಮಟ್ಟವನ್ನು ಕಡಿಮೆಮಾಡುತ್ತದೆ. ಸರಿಯಾದ ಆಹಾರ ಕ್ರಮ ಹಾಗೂ ವ್ಯಾಯಾಮದಿಂದಲೂ ಟ್ರೈಗ್ಲಿಸರೈಡ್‌ನ ಅಂಶ ಕಡಿಮೆಯಾಗದಿದ್ದರೆ ಇದನ್ನು ಕಡಿಮೆ ಮಾಡಲು ಅನೇಕ ಔಷಧಿಗಳು ಲಭ್ಯವಿವೆ.

ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322

## ಪದೋನ್ನತಿ

ಕಳೆದ 40 ವರ್ಷಗಳಿಂದ ನೀರೆಬೈಲೂರು ಬಿ.ಇ.ಯಂ. ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹಅಧ್ಯಾಪಕಿಯಾಗಿರುವ ಶ್ರೀಮತಿ ಕೆ. ಜ್ಞಾನೇಶ್ವರಿಯವರು ಇತ್ತೀಚೆಗೆ ಮುಖ್ಯೋಪಾಧ್ಯಾಯಿನಿಯಾಗಿ ನಿಯುಕ್ತಿಗೊಂಡು ಸೇವೆ ಸಲ್ಲಿಸುತ್ತಿದ್ದಾರೆ. ಇವರು ಪರ್ಕಳದಲ್ಲಿ ಸಿಂಡಿಕೇಟ್ ಬ್ಯಾಂಕ್ ನಿವೃತ್ತ ಆಫೀಸರ್ ರಾಮಚಂದ್ರ ಕೊಠಾರಿಯವರ ಧರ್ಮಪತ್ನಿ.

## ಗೃಹಪ್ರವೇಶ

ಶ್ರೀಮತಿ ಕೆ. ಜ್ಞಾನೇಶ್ವರಿ ಮತ್ತು ಶ್ರೀ ರಾಮಚಂದ್ರ ಕೊಠಾರಿಯವರ ಪುತ್ರ ಶ್ರೀ ಶರತ್‌ಚಂದ್ರ ಪಿ. ಹಾಗೂ ಶ್ರೀಮತಿ ಸ್ಮಿತಾ ದಂಪತಿಗಳು ಬೆಂಗಳೂರು ಬಾಣಸವಾಡಿ ರಿಂಗ್ ರೋಡಿನ ಹತ್ತಿರ ಖರೀದಿಸಿದ ಗೃಹದ ಪ್ರವೇಶೋತ್ಸವವನ್ನು ತಾ.9-9-2012ರಂದು ಬಂಧು ಬಾಂಧವರೊಡಗೂಡಿ ನೆರವೇರಿಸಿದರು.

## ನಾಮಕರಣ

ಶ್ರೀಮತಿ ಕೆ. ಜ್ಞಾನೇಶ್ವರಿ ಮತ್ತು ಶ್ರೀ ರಾಮಚಂದ್ರ ಕೊಠಾರಿ ಇವರ ಪುತ್ರ ಶ್ರೀ ಸುದೀಪ್ ಎ. ಮತ್ತು ಶ್ರೀಮತಿ ಅನಿತಾ ದಂಪತಿಗಳ ಪುತ್ರಿ ಸಾನ್ವಿಯ ನಾಮಕರಣ ಸಮಾರಂಭವು ಬೆಂಗಳೂರು ವಿಜಯನಗರ ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನದ ಹಾಲ್ ನಲ್ಲಿ ತಾ.10-09-2012ರಂದು ಬಂಧು ಬಾಂಧವರ ಉಪಸ್ಥಿತಿಯಲ್ಲಿ ನೆರವೇರಿತು.

## ಶುಭ ಜನನ

ಅಲೆವೂರಿನಲ್ಲಿರುವ ಪಡುಬಿದ್ರಿ ಶ್ರೀಮತಿ ಕೆ. ಮೋಹಿನಿ ಶಾಸ್ತ್ರಿ ಮತ್ತು ಶ್ರೀ ಕೆ. ದೇವರಾಯ ಶಾಸ್ತ್ರಿಯವರ ಪುತ್ರ ಕೆ. ನಿತಿನ್ ಕುಮಾರ ಮತ್ತು ಶ್ರೀಮತಿ ಅಕ್ಷತಾ (ಹೆಜಮಾಡಿನಲ್ಲಿರುವ ಶ್ರೀಮತಿ ಜಯಲಕ್ಷ್ಮೀ ಮತ್ತು ಶ್ರೀ ಶ್ರೀಪತಿ ರಾಯರ ಪುತ್ರಿ) ಇವರಿಗೆ ತಾ.3-9-2012 ರಂದು ಹೆಣ್ಣು ಶಿಶು ಜನನ.

## ಸತ್ಯನಾರಾಯಣಪೂಜೆ-ನಾಮಕರಣ

ತಾ 25-6-2012ರಂದು ಹರ್ಷಕುಮಾರ್ ಕೇದಿಗೆಯವರು ತಮ್ಮ ಸ್ವಗೃಹ ಅನುಗ್ರಹದಲ್ಲಿ ಸತ್ಯನಾರಾಯಣ ಪೂಜೆ ಹಾಗೂ ತನ್ನ ಮೊಮ್ಮಗ, ಪ್ರಮೋದ್ ಮತ್ತು ಸ್ವಾತಿ ದಂಪತಿಗಳ ಪುತ್ರನಿಗೆ ಹಾರ್ದಿಕ್ ಎಂದು ನಾಮಕರಣ ಮಹೋತ್ಸವ ನೇರವೇರಿಸಿದರು.

## ಕನ್ಯಾ ಮಾಸದ ವಿಶೇಷ ದಿನಗಳು

| | |
|---|---|
| 23-10-2012 | ಆಯುಧ ಪೂಜಾ |
| 24-10-2012 | ವಿಜಯದಶಮಿ |
| 25-10-2012 | ಸರ್ವೈಕಾದಶಿ |
| 29-10-2012 | ಹುಣ್ಣಿಮೆ |
| 02-11-2012 | ಸಂಕಷ್ಟಹರ ಚೌತಿ |
| 10-11-2012 | ಏಕಾದಶಿ |
| 12-11-2012 | ನರಕಚತುರ್ದಶಿ, ತ್ರಯೋದಶಿ |
| 13-11-2012 | ದೀಪಾವಳಿ, ಅಮಾವಾಸ್ಯೆ, ಬಲೀಂದ್ರ ಪೂಜಾ |
| 15-11-2012 | ವೃಶ್ಚಿಕ ಸಂಕ್ರಮಣ |

॥ ಸರ್ವಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಿಕೇ ॥
॥ ಶರಣ್ಯೇ ತ್ರ್ಯಂಬಕೇ ಗೌರಿ, ನಾರಾಯಣಿ ನಮೋಸ್ತುತೇ ॥

# ಬಳ್ಪ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ ಮತ್ತು ಬಳ್ಪ ಶ್ರೀ ತ್ರಿಶೂಲಿನೀ ದೇವಸ್ಥಾನ

ಅಂಚೆ:ಬಳ್ಪ, ಸುಳ್ಯ ತಾಲೂಕು,ದ.ಕ-574232
ದೂರವಾಣಿ:08257-203107, 9880300639,9945404797

ಆತ್ಮೀಯ ಭಗವದ್ಭಕ್ತರೇ,

ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಾಧೀಶ್ವರರಾದ **ಶ್ರೀಮದ್ ಜಗದ್ಗುರು ಶಂಕರಾಚಾರ್ಯ, ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ** ಪರಮಾನುಗ್ರಹದಿಂದ **ಬಳ್ಪ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ ಮತ್ತು ಶ್ರೀ ತ್ರಿಶೂಲಿನೀ ದೇವಸ್ಥಾನದಲ್ಲಿ** ನಂದನ ನಾಮ ಸಂವತ್ಸರದ ಆಶ್ವಯುಜ ಶುಕ್ಲ ೧ಯು ದಿನಾಂಕ 16-10-2012ನೇ ಮಂಗಳವಾರದಿಂದ ದಿನಾಂಕ 24-10-2012ನೇ ಬುಧವಾರ ತನಕ

## ಮಹಾನವರಾತ್ರಿ ಉತ್ಸವಗಳು

ಜರಗಲಿರುವುದು.

ಆ ಪ್ರಯುಕ್ತ ತಾವೆಲ್ಲರೂ ಬಂದು ಈ ಸತ್ಕಾರ್ಯಗಳಲ್ಲಿ ಭಾಗವಹಿಸಿ ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ

**ಶ್ರೀ ಎಂ.ಆರ್. ವಾಸುದೇವ** ಗೌರವಾಧ್ಯಕ್ಷರು
**ಶ್ರೀ ಕರುಣ್ ಬೆಳ್ಳೆ** ಗೌರವಾಧ್ಯಕ್ಷರು
**ಶ್ರೀ ಎಂ.ವಿ.ಶ್ರೀವತ್ಸ** ಆನುವಂಶಿಕ ಆಡಳಿತ ಮೊಕ್ತೇಸರರು **ಮತ್ತು ಸಮಿತಿ ಸರ್ವಸದಸ್ಯರು**

**ಶ್ರೀ ಕೆ.ಗೋಪಾಲರಾವ್** ಅಧ್ಯಕ್ಷರು
**ಶ್ರೀ ಶ್ರೀಕೃಷ್ಣ ಭಟ್ ಪಟೋಳಿ** ಅಧ್ಯಕ್ಷರು

**ಶ್ರೀ ರಾಮಚಂದ್ರ ಗೌಡ ಎರುಂಬಿಲ** ಕಾರ್ಯಾಧ್ಯಕ್ಷರು **ಮತ್ತು ಸರ್ವಸದಸ್ಯರು** ಜೀರ್ಣೋದ್ಧಾರ ಸಮಿತಿ
**ಶ್ರೀ ಸೂರಪ್ಪ ಗೌಡ ಪಂಡಿ** ಕಾರ್ಯಾಧ್ಯಕ್ಷರು **ಮತ್ತು ಸರ್ವಸದಸ್ಯರು** ಧಾರ್ಮಿಕ ಉತ್ಸವ ಸಮಿತಿ

**ಶ್ರೀ ಎಂ.ವಿ.ರಾಧಾಕೃಷ್ಣರಾವ್, ಶ್ರೀ ಚಂದ್ರಶೇಖರ ಭಟ್ ಎನ್. ಶ್ರೀ ಸದಾನಂದ ಶಾಸ್ತ್ರಿ-ಅರ್ಚಕರು**
ಹಾಗೂ ಊರ ಹತ್ತು ಸಮಸ್ತರು

**ದೇವಳದಲ್ಲಿ ನಡೆಯುವ ವಾರ್ಷಿಕ ಕಾರ್ಯಕ್ರಮಗಳು**

1. ಭಾದ್ರ ಪದ ಶುಕ್ಲ ಚತುರ್ಥಿ ತಾ.19-09-2012ನೇ ಬುಧವಾರ ಶ್ರೀ ಮಹಾಗಣಪತಿ ದೇವರ ಸನ್ನಿಧಿಯಲ್ಲಿ ಗಣಪತಿ ಹೋಮ ಅಪೂಪ(ಅಪ್ಪ) ಸೇವೆ ರಾತ್ರಿ ರಂಗಪೂಜೆ
2. ನವರಾತ್ರಿ
3. ವಿಜಯದಶಮಿ ರಾತ್ರಿ ಸಣ್ಣ ರಂಗಪೂಜೆ
4. ದೀಪಾವಳಿ ಅಮಾವಾಸ್ಯೆ ದಿನ ತಾ.13-11-2012ನೇ ಮಂಗಳವಾರ ಶ್ರೀ ದೇವರ ಸನ್ನಿಧಿಯಲ್ಲಿ ಸಣ್ಣ ರಂಗಪೂಜೆ
5. ಶುಭ ಸಂಕ್ರಮಣ ದಿನ ತಾ.12-02-2013ನೇ ಮಂಗಳವಾರ ಪ್ರತಿಷ್ಠಾ ವಾರ್ಷಿಕೋತ್ಸವ ರಾತ್ರಿ ದರ್ಶನಬಲಿ,ನೃತ್ಯ ಬಲಿ,ಪಲ್ಲಕ್ಕಿ ಉತ್ಸವ ಮಂಟಪ ಪೂಜಾ ಅಷ್ಟಾವಿಧಾನ ಸೇವಾದಿ ಕಾರ್ಯಕ್ರಮಗಳು.
6. ಇದೇ ದಿನ ರಕ್ತೇಶ್ವರೀ ದೈವ ಮತ್ತು ಗುಳಿಗ ದೈವಗಳಿಗೆ ತಂಬಿಲ ಸೇವೆ.
7. ವರ್ಷಾರಂಭ ಸೌರ ಯುಗಾದಿ ದಿನ-ವಿಷು ಕಣಿ
8. ವೈಶಾಖ ಶುದ್ಧ ಪಂಚಮಿ ಶಂಕರ ಜಯಂತಿ
9. ವೈಶಾಖ ಶುದ್ಧ ಚತುರ್ದಶೀ ಶ್ರೀ ಯೋಗನರಸಿಂಹ ಸ್ವಾಮಿ ಸನ್ನಿಧಿಯಲ್ಲಿ ನರಸಿಂಹ ಜಯಂತಿ
10. ವೃಷಭ ಮಾಸ 10 ಪತ್ತನಾಜೆ ಪ್ರಯುಕ್ತ ಸಣ್ಣ ರಂಗಪೂಜೆ ಈ ಎಲ್ಲಾ ಕಾರ್ಯಕ್ರಮಗಳು ಸಾಮೂಹಿಕವಾಗಿ ಜರಗಲಿರುವುದು.

**ವಿ.ಸೂ. :**

1. ದಿನಾಂಕ 24-10-2012ನೇ ಬುಧವಾರ ನಡೆಯಲಿರುವ ಸಾಮೂಹಿಕ ರಂಗಪೂಜೆಯ ಸೇವಾ ರಶೀದಿ ರೂ.101.00
2. ನವರಾತ್ರಿ ಕಾರ್ಯಕ್ರಮಕ್ಕೆ ತನು-ಮನ-ಧನಗಳಿಂದ ಸಹಕರಿಸಿ ಹಾಗೂ ಹಸಿರು ಕಾಣಿಕೆಗಳನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲಾಗುವುದು.
3. ನವರಾತ್ರಿ ಸಮಯದಲ್ಲಿ ಶ್ರೀದೇವರ ಸನ್ನಿಧಿಯಲ್ಲಿ ಮಧ್ಯಾಹ್ನ ಮತ್ತು ರಾತ್ರಿ ನಿತ್ಯ ಅನ್ನಸಂತರ್ಪಣೆ ಇರುವುದು.


# ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

## ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: **"ಸತ್ಸಂಗದವರಿಂದ ಭಜನೆ"** ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: **"ಸೌಂದರ್ಯಲಹರಿ ಪಾರಾಯಣ"** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **"ಪಾರಾಯಣ"** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.02-11-2012) "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.19-10-2012 ಲಲಿತಾ ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.20-10-2012 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**


# ಮಠಂತಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನ

**ಕೋಡಿಂಬಾಡಿ-ಪುತ್ತೂರು ತಾಲೂಕು, ದ.ಕ.**
**ದೂರವಾಣಿ: 08251-261010, ಮೊ. : 9901247080**

ಆತ್ಮೀಯ ಸಮಾಜಬಾಂಧವರೇ,

ಮಠಂತ ಬೆಟ್ಟು ಶ್ರೀರಾಜರಾಜೇಶ್ವರಿ ದೇವಸ್ಥಾನದಲ್ಲಿ ಬರುವ ದಿನಾಂಕ 16-10-2012ರಿಂದ ದಿನಾಂಕ 24-10-2012ರ ತನಕ ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ

## ನವರಾತ್ರಿ ಉತ್ಸವ ಮತ್ತು ಶ್ರೀ ಚಂಡಿಕಾ ಹೋಮದೊಂದಿಗೆ

(ದಿನಾಂಕ 21-10-2012ರಂದು) ನಡೆಯಲಿದೆ.

ಸಮಾಜಬಾಂಧವರು ಈ ದೇವತಾ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಶ್ರೀದೇವಿಯ ತೀರ್ಥ ಪ್ರಸಾದವನ್ನು ಸ್ವೀಕರಿಸಿ ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುವ,

ಅರ್ಚಕರು : **ಶ್ರೀ ಯಂ. ನಾಗೇಶ ಶರ್ಮ**
ಮೊಬೈಲ್ : 9901247080


ಅಧ್ಯಕ್ಷರು : **ಶ್ರೀ ಟಿ.ಅಣ್ಣಪ್ಪಯ್ಯ** ತೆಂಕಿಲ

**ಹಾಗೂ ಆಡಳಿತ ಮಂಡಳಿ ಸದಸ್ಯರು**

ವಿಶೇಷ ಸೇವೆ : **ಅನ್ನಸಂತರ್ಪಣೆ : 501/-**
**ಚಂಡಿಕಾ ಹೋಮ : 501/-, ರಂಗಪೂಜೆ : 301/-, ನವರಾತ್ರಿ ಪೂಜೆ : 201/-**

ಸಮಾಜ ಬಾಂಧವರು ಅನ್ನ ಸಂತರ್ಪಣೆಗೆ ಸಹಕರಿಸಬೇಕಾಗಿ ವಿನಂತಿ





**ಎಮ್. ದೇವಾನಂದ್ ಭಟ್**
Cell : 9845644556
9483913344



**ಶೋಭಾ ಡಿಜಿಟಲ್**
ಸ್ಟುಡಿಯೋ & ವೀಡಿಯೊ

**ಬೆಳ್ವಾಯಿ-574213** (08258)-276177 (O)
**ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್** 9901995655
**ಎಡಪದವು - 574 164** (0824)-2256374 (O) **ಮಂಗಳೂರು, ದ.ಕ.**

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan YOUR GUIDE TO THE FINANCIAL JUNGLE

Visit : www.sharekhan.com


Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Rajataadri, Manipal, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org